ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ– 04, ಭೂತರಾಮನಹಟ್ಟಿ, ಬೆಳಗಾವಿ – 591156

(ನ್ಯಾಕ್ ಮಾನ್ಯತೆ B+ ಗ್ರೇಡ್– 2021) PM-USHA (MERU)

# 94ನೇ ಸಾಮಾನ್ಯ ಸಿಂಡಿಕೇಟ್ ಸಭೆ ಹಾಗೂ 2025ನೇ ಸಾಲಿನ 5ನೇ ಸಭೆಯ ನಡಾವಳಿಗಳು

ದಿನಾಂಕ : ಮಂಗಳವಾರ, 08-07-2025

ಸಮಯ : ಮಧ್ಯಾಹ್ನ 12 : 00 ಘಂಟೆ

ಸ್ಥಳ : ಸ್ನಾತಕೋತ್ತರ ಕೇಂದ್ರ
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ,
ವಿಜಯಪುರ.

# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ– 04, ಭೂತರಾಮನಹಟ್ಟಿ, ಬೆಳಗಾವಿ – 591156

**(ನ್ಯಾಕ್ ಮಾನ್ಯತೆ B+ ಗ್ರೇಡ್– 2021) PM-USHA (MERU)**

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ **94ನೇ ಸಾಮಾನ್ಯ ಸಿಂಡಿಕೇಟ್** ಹಾಗೂ **2025ನೇ ಸಾಲಿನ 5ನೇ ಸಭೆಯನ್ನು**, ದಿನಾಂಕ 08 ಜುಲೈ 2025 ರಂದು ಮಧ್ಯಾಹ್ನ 12.00 ಘಂಟೆಗೆ ಜರುಗಿದ ಸಭೆಗೆ ಹಾಜರಿದ್ದ/ಹಾಜರಿರದ ಸದಸ್ಯರುಗಳ ವಿವರ.

**I. ಹಾಜರಿದ್ದ ಸದಸ್ಯರು**

| | | |
|---|---|---|
| 1. | **ಪ್ರೊ. ಸಿ. ಎಂ. ತ್ಯಾಗರಾಜ** | **ಕುಲಪತಿಗಳು ಹಾಗೂ ಅಧ್ಯಕ್ಷರು** |
| 2. | ಪ್ರೊ. ಡಿ.ಎನ್. ಪಾಟೀಲ | ಸದಸ್ಯರು |
| 3. | ಶ್ರೀ ವಿನೀತ್ ವ. ಜೋಶಿ | ಸದಸ್ಯರು |
| 4. | ಶ್ರೀ ಈರಣ್ಣ ಬ. ಹಪ್ಪಲಿ | ಸದಸ್ಯರು |
| 5. | ಶ್ರೀ ಆರ್. ಎಂ. ದೇವರಡ್ಡಿ | ಸದಸ್ಯರು |
| 6. | ಶ್ರೀ ಜಗದೀಶ ಜೋಡಂಗಿ | ಸದಸ್ಯರು |
| 7. | ಶ್ರೀ ಎಸ್. ಎ. ದೇಶಮುಖ್ | ಸದಸ್ಯರು |
| 8. | ಶ್ರೀಮತಿ ಎಸ್. ಬಿ.ಢಂಗ | ಸದಸ್ಯರು |
| 9. | ಡಾ. ಕಾವೇರಿ ಎಚ್.ಎಂ. | ಸದಸ್ಯರು |
| 10. | ಶ್ರೀ. ರಫೀ ಭಂಡಾರಿ | ಸದಸ್ಯರು |
| 11. | ಶ್ರೀ. ರವೀಂದ್ರ ಎಂ. ನಾಯ್ಕರ್ | ಸದಸ್ಯರು |
| 12. | ಡಾ. ಮಾರುತಿ ಎಚ್. ಮುಂಡರಗಿ | ಸದಸ್ಯರು |
| 13. | ಶ್ರೀ. ಮಹಾಂತೇಶ ಕಂಬಾರ | ಸದಸ್ಯರು |
| 14. | ಡಾ. ಎಸ್.ಎಸ್. ಅಂಗಡಿ | ಸದಸ್ಯರು |
| 15. | ಶ್ರೀಮತಿ ಎಂ.ಎ. ಸಪ್ನ, ಕೆ.ಎ.ಎ.ಎಸ್.(ಹಣಕಾಸು ಅಧಿಕಾರಿಗಳು) | ವಿಶೇಷ ಆಹ್ವಾನಿತರು |
| 16. | ಪ್ರೊ. ಡಿ. ಎನ್. ಪಾಟೀಲ್ ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 17. | ಶ್ರೀ. ಸಂತೋಷ ಕಾಮಗೌಡ ಕೆ.ಎ.ಎಸ್.(ಹಿರಿಯ ಶ್ರೇಣಿ) | **ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು** |

**II. ಹಾಜರಾಗದ ಸದಸ್ಯರು:**

| | | |
|---|---|---|
| 1. | ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ | ಸದಸ್ಯರು |
| 2. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ | ಸದಸ್ಯರು |
| 3. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ | ಸದಸ್ಯರು |
| 4. | ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ | ಸದಸ್ಯರು |
| 5. | ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ | ಸದಸ್ಯರು |

# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ– ೦4, ಭೂತರಾಮನಹಟ್ಟಿ, ಬೆಳಗಾವಿ – 591156

(ನ್ಯಾಕ್ ಮಾನ್ಯತೆ B+ ಗ್ರೇಡ್– 2021) PM-USHA (MERU)

## ಸಿಂಡಿಕೇಟ್ ಪ್ರಾಧಿಕಾರ ಸಭೆಯ ನಡುವಳಿಗಳು

**ವಿಷಯ:** ದಿನಾಂಕ 08 ಜುಲೈ 2025 ರಂದು ಸ್ನಾತಕೋತ್ತರ ಕೇಂದ್ರ, ವಿಜಯಪುರ ಇಲ್ಲಿ ನಡೆದ ವಿಶ್ವವಿದ್ಯಾಲಯದ 94ನೇ ಹಾಗೂ 2025ನೇ ಸಾಲಿನ 5ನೇಸಾಮಾನ್ಯ ಸಿಂಡಿಕೇಟ್ ಪ್ರಾಧಿಕಾರ ಸಭೆಯ ನಡುವಳಿಗಳು.

**ಉಲ್ಲೇಖ:** 1. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ (27)(28)(2).
2. ಮಾನ್ಯ ಕುಲಪತಿಗಳು ಸಭೆ ನಡೆಸಲು ನೀಡಿದ ಅನುಮೋದನೆ ದಿ: 23.06.2025.
3. ಸಿಂಡಿಕೇಟ್ ಪ್ರಾಧಿಕಾರ ಸಭೆ ನೋಟಿಸ್ ದಿನಾಂಕ: 23.06.2025.

**ಪ್ರಸ್ತಾವನೆ:**

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ (28)(2)ರ ಅನುಗುಣವಾಗಿ ಸಿಂಡಿಕೇಟ್ ಪ್ರಾಧಿಕಾರದ 94ನೇ ಹಾಗೂ 2025 ನೇ ಸಾಲಿನ 5 ನೇ ಸಾಮಾನ್ಯ ಸಿಂಡಿಕೇಟ್ ಸಭೆಯನ್ನು ದಿನಾಂಕ: 08.07.2025 ರಂದು ಮಧ್ಯಾಹ್ನ 12.00 ಘಂಟೆಗೆ ಸ್ನಾತಕೋತ್ತರ ಕೇಂದ್ರ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ವಿಜಯಪುರ ಇಲ್ಲಿ ಆಯೋಜನೆ ಮಾಡಲಾಗಿತ್ತು. ಸರ್ಕಾರದಿಂದ ಮೌಲ್ಯಮಾಪನ ಕುಲಸಚಿವರಾಗಿ ನಿಯೋಜನೆಗೊಂಡ ಪ್ರೊ. ಡಿ. ಎನ್. ಪಾಟೀಲ್ ಇವರಿಗೆ ಹೂಗುಚ್ಛ ನೀಡಿ ಸಭೆಗೆ ಬರಮಾಡಿಕೊಳ್ಳಲಾಯಿತು ಹಾಗೂ ಕುಲಸಚಿವರು ಸಭೆಯ ಅಧ್ಯಕ್ಷರು ಮತ್ತು ಸದಸ್ಯರುಗಳನ್ನು ಸ್ವಾಗತಿಸಿದರು.

ಸ್ಥಳೀಯ ಸದಸ್ಯರಾದ ಶ್ರೀ ರಫೀ ಭಂಡಾರಿ ಇವರು ಸಭೆಯ ಅಧ್ಯಕ್ಷರು ಹಾಗೂ ಸದಸ್ಯರುಗಳನ್ನು ಸ್ವಾಗತಿಸಿ, ಸಿಂಡಿಕೇಟ್ ಸಭೆಯನ್ನು ಸ್ನಾತಕೋತ್ತರ ಕೇಂದ್ರ, ವಿಜಯಪುರ ಇಲ್ಲಿ ಆಯೋಜಿಸಿದ್ದಕ್ಕೆ ಧನ್ಯವಾದ ತಿಳಿಸಿದರು. ಈ ಹಿಂದೆ ವಿಜಯಪುರದ ಸ್ನಾತಕೋತ್ತರ ಕೇಂದ್ರವು ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಇತ್ತು. ಸರ್ಕಾರದಿಂದ ರಾಣಿ ಚನ್ನಮ್ಮ ವಿಶ್ವವಿದ್ಯಾಲಯವು ಸ್ವತಂತ್ರ ವಿಶ್ವವಿದ್ಯಾಲಯವಾದ ನಂತರ ಪ್ರಸ್ತುತ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಟ್ಟಿದ್ದು 33 ವರ್ಷಗಳ ಸುದೀರ್ಘ ಇತಿಹಾಸವನ್ನು ಹೊಂದಿದೆ. ಇಲ್ಲಿ ಹಲವು ಅಭಿವೃದ್ಧಿ ಕಾರ್ಯಗಳು ಜರುಗಿದ್ದು ಪ್ರಸ್ತುತ ಕುಲಪತಿಗಳ ಅಧಿಕಾರಾವಧಿಯಲ್ಲಿ ದ್ವಾರ(Gate) ಮತ್ತು ಕಂಪೌಂಡ್ ನಿರ್ಮಾಣ ಕಾಮಗಾರಿಗಳು ಪ್ರಗತಿಯಲ್ಲಿವೆ. ಸ್ನಾತಕೋತ್ತರ ಕೇಂದ್ರವು ವಚನ ಸಾಹಿತ್ಯ ಸಂಗ್ರಹಕಾರ ಡಾ. ಫ. ಗು. ಹಳಕಟ್ಟಿ ಇವರ ನಾಮದಲ್ಲಿದ್ದು, ವಚನ ಸಾಹಿತ್ಯ ಸಂಗ್ರಹಕ್ಕೆ ಅವರು ನೀಡಿದ ಕೊಡುಗೆಯನ್ನು ಸ್ಮರಿಸಿದರು. ಜಗಜ್ಯೋತಿ ಬಸವಣ್ಣನವರ ವಚನಗಳ ಸಂಗ್ರಹಣೆ, ತಮ್ಮ ಸ್ವಂತಮನೆ ಮಾರಿ "ಹಿಂತಚಿಂತಕ ಮುದ್ರಣಾಲಯ"ವನ್ನು ಪ್ರಾರಂಭಿಸಿ ಜಗತ್ತಿಗೆ ಹಲವು ಕೊಡುಗೆಗಳನ್ನು ನೀಡಿದ್ದಾರೆ. ಕಾರಣ, ಜಗಜ್ಯೋತಿ ಬಸವಣ್ಣನವರು ಹಾಗೂ ಡಾ. ಫ. ಗು. ಹಳಕಟ್ಟಿ ಇವರುಗಳ ಕುರಿತಾಗಿ ಜಗತ್ತಿಗೆ ಹೆಚ್ಚಿನ ಮಾಹಿತಿ ನೀಡಲು ಇಬ್ಬರು ಮಹನೀಯರ ಅಧ್ಯಯನ ಪೀಠವನ್ನು ಪ್ರಾರಂಭಿಸಲು ಸಲಹೆ ನೀಡಿದರು ಹಾಗೂ ಸ್ನಾತಕೋತ್ತರ ಕೇಂದ್ರವನ್ನು ಬಲವರ್ಧಿಸಲು ಹುಮ್ಮಸ್ಸಿನಿಂದ ಕಾರ್ಯನಿರ್ವಹಿಸಲು ಕರೆ ನೀಡಿದರು. PM-Usha ಯೋಜನೆಯಡಿಯಲ್ಲಿ New Module Degree College ಸ್ಥಾಪಿಸಲು ಅವಕಾಶವಿದ್ದು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಮತ್ತು ಸ್ನಾತಕೋತ್ತರ ಕೇಂದ್ರ, ವಿಜಯಪುರದಲ್ಲಿ ಎರಡು New Module Degree College ಸ್ಥಾಪಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ತಿಳಿಸಿದರು.

ಮಾನ್ಯ ಕುಲಪತಿಗಳು ವಿಜಯಪುರದಲ್ಲಿ ಕ್ರೀಡೆಗೆ ಹೆಚ್ಚಿನ ಆಸಕ್ತಿ ಇರುವುದರಿಂದ ಸ್ನಾತಕೋತ್ತರ ಕೇಂದ್ರ, ವಿಜಯಪುರದಲ್ಲಿ Sport Complex ನಿರ್ಮಿಸಲು ಚಿಂತನೆ ನಡೆಸಲಾಗಿದೆ. ಹಾಗೂ ವಿಕಲಚೇತನ ವ್ಯಕ್ತಿಗಳ ಪುನರ್ ವಸತಿಗಾಗಿ ಸಮುದಾಯ ಅಭಿವೃದ್ಧಿ ಕೇಂದ್ರವನ್ನು(Community Development Centre) ಸ್ಥಾಪಿಸಲಾಗುವುದು ಎಂದರು. ದಿನಾಂಕ: 06.06.2025 ರಂದು ಜರುಗಿದ ವಿದ್ಯಾವಿಷಯಕ್ ಪರಿಷತ್ ಸಭೆಯಲ್ಲಿ ವಿದ್ಯಾರ್ಥಿಗಳು ಕಲಿಕೆಯಲ್ಲಿ ಕ್ರಿಯಾತ್ಮಕವಾಗಿ ಪಾಲ್ಗೊಳ್ಳಲು ಹಾಗೂ ಕೌಶಲ್ಯ ಅಭಿವೃದ್ಧಿಗಾಗಿ 2025-26 ನೇ ಶೈಕ್ಷಣಿಕ ಸಾಲಿನಿಂದ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳಲ್ಲಿ Work book ಪದ್ಧತಿಯನ್ನು ಕಡ್ಡಾಯಗೊಳಿಸಲು ತೀರ್ಮಾನಿಸಲಾಗಿತ್ತು. ಅದರಂತೆ ವಿಭಾಗಗಳ ಅಭ್ಯಾಸ ಮಂಡಳಿಯ ಅಧ್ಯಕ್ಷರು ಸಲ್ಲಿಸಿದ ಏಕಲವ್ಯ ಅಭ್ಯಾಸ ಪುಸ್ತಕದ ಕರಡು ರಚಿಸಿದ್ದು ಸಭೆಗೆ ಪ್ರಸ್ತುತ ಪಡಿಸಿ ಇದು ರಾಜ್ಯದಲ್ಲಿ ವಿನೂತನ ಪ್ರಯೋಗವಾಗಿದೆ ಎಂದರು.

ತದನಂತರ, ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಿಸಿದ ನಂತರ ಈ ಕೆಳಕಾಣಿಸಿದಂತೆ ವಿಷಯಸೂಚಿಗಳನ್ನು ಪ್ರಸ್ತಾಪಿಸಲಾಯಿತು.

**ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 94ನೇ ಹಾಗೂ 2025 ನೇ ಸಾಲಿನ 5ನೇ ಸಾಮಾನ್ಯ ಸಿಂಡಿಕೇಟ್ ಸಭೆಯ ಕಾರ್ಯಸೂಚಿ ಅನುಗುಣವಾಗಿ ದಿನಾಂಕ 08-07-2025 ರಂದು ಕೈಗೊಂಡ ತೀರ್ಮಾನಗಳು.**

| | ಸಂಖ್ಯೆ | ಕಾರ್ಯಸೂಚಿ ವಿವರ ಹಾಗೂ ಕೈಗೊಂಡ ತೀರ್ಮಾನಗಳು |
|---|---|---|
| 01 | 2025/07/01 | ದಿನಾಂಕ: 10.06.2025 ರಂದು ಜರುಗಿದ ಸಭೆಯ ಗೊತ್ತುವಳಿ ಹಾಗೂ ಅನುಪಾಲನಾ ವರದಿಯನ್ನು ದೃಢೀಕರಣಕ್ಕಾಗಿ ಸಭೆಯ ಮುಂದಿಡಲಾಯಿತು.<br><br>**2025/06/15:** ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಯುಜಿ ಕೋರ್ಸಗಳಲ್ಲಿ ಹೋಟೆಲ್ ಮ್ಯಾನೇಜಮೆಂಟ್ ಕೋರ್ಸನ್ನು ಪ್ರಾರಂಭಿಸುವ ವಿಷಯಕ್ಕೆ ಕಾಲೇಜು ಅಭಿವೃದ್ಧಿ ಮಂಡಳಿಯಿಂದ ಸ್ಥಳೀಯ ತನಿಖಾ ಸಮಿತಿಯನ್ನು ನಿಯೋಜಿಸಿ ಸದರಿ ಸಮಿತಿಯ ವರದಿಯನ್ನು ಆಧಾರಿಸಿ ಮುಂದಿನ ಕ್ರಮ ಕೈಗೊಳ್ಳಲು ಸಭೆಯು ತೀರ್ಮಾನಿಸಿತು. ಮುಂದುವರೆದು, ವಿಶ್ವವಿದ್ಯಾಲಯದ ಸ್ನಾತಕ ಕೋರ್ಸನಲ್ಲಿ ಪ್ರಾರಂಭಿಸಲು ಸರ್ಕಾರಕ್ಕೆ ಹಾಗೂ AICTE ಗೆ ಪ್ರಸ್ತಾವನೆಯನ್ನು ಸಲ್ಲಿಸಲು ಕ್ರಮ ಕೈಗೊಳ್ಳಲಾಗಿದೆ. ಸದರಿ ವಿಷಯವನ್ನು ಸಭೆಯು ದೃಢೀಕರಿಸಿತು.<br><br>**2025/06/33:** ಗೀತೆ ರಚನೆ ಉಪಸಮಿತಿ ಸಭೆಯ ವರದಿಯನ್ನು ಸಭೆಗೆ ಮಂಡಿಸುವ ಕುರಿತು ತೀರ್ಮಾನದಲ್ಲಿ ಪ್ರಾರ್ಥನಾ ಗೀತೆಯ ಬದಲಾಗಿ "ಸಂವಿಧಾನ ಪೀಠಿಕೆ" ಎಂದು ತಿದ್ದುಪಡಿಗೊಳಿಸಲಾಯಿತು. ಸದರಿ ವಿಷಯಕ್ಕೆ ಸಭೆಯು ದೃಢೀಕರಿಸಿತು. |
| ತೀರ್ಮಾನ | | ದಿನಾಂಕ **10.06.2025** ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ಗೊತ್ತುವಳಿಗಳ ಅನುಪಾಲನಾ ವರದಿಯನ್ನು ಸಭೆಯು ಪರಿಶೀಲಿಸಿ ದೃಢೀಕರಿಸಿತು. |
| 02 | 2025/07/02 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಬೋಧಕ ಸಿಬ್ಬಂದಿಗಳಿಗೆ ಕುಲಪತಿಗಳ ಹುದ್ದೆಗೆ ಅರ್ಜಿ ಸಲ್ಲಿಸಲು ಮತ್ತು Fellowship ಅಧ್ಯಯನಕ್ಕಾಗಿ ಅರ್ಜಿ ಸಲ್ಲಿಸಲು ಅನುಮತಿ ನೀಡಿರುವುದ್ದಕ್ಕೆ ಸಭೆಯ ಅನುಸಮರ್ಥನೆಗಾಗಿ ಮಂಡಿಸುವ ಕುರಿತು. |
| ತೀರ್ಮಾನ | | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಈ ಕೆಳಕಾಣಿಸಿದ ಬೋಧಕ ಸಿಬ್ಬಂದಿಗಳಿಗೆ ಕುಲಪತಿಗಳ ಹುದ್ದೆಗೆ ಅರ್ಜಿ ಸಲ್ಲಿಸಲು ನಿರಾಕ್ಷೇಪಣಾ ಪ್ರಮಾಣ ಪತ್ರ ಮತ್ತು Fellowship ಅಧ್ಯಯನಕ್ಕಾಗಿ ಅರ್ಜಿ ಸಲ್ಲಿಸಲು ಅನುಮತಿ ನೀಡಲಾಗಿದೆ. ಸದರಿ ವಿಷಯವನ್ನು ಪರಿಶೀಲಿಸಿ ಸಭೆಯು ಅನುಸಮರ್ಥನೆ ನೀಡಿತು. |

| SL No | Name of the Teaching Staff | Details of permission to apply | Post applied/Subject |
|---|---|---|---|
| 1 | Prof. Basavaraj Padmashali, Senior Professor, Department of Chemistry | Tripura University (A Central University) Tripura(W)-799 022.<br>Central University of Punjab, VPO-Ghudda, Bathinda, Punjab-151 401. | Vice-Chancellor |
| 2 | Prof. V. F. Nagannawar, Senior Professor, Department of English | Central University of Punjab, VPO-Ghudda, Bathinda, Punjab-151 401.<br>Dr. Harisingh Gour Vishwavidyalaya, Sagar-170 003(MP) | Vice-Chancellor |
| 3 | Dr Nagaratna Parande Professor Department of English | USIEF-USA | Fulbright-Nehru Fellowhip-2026. |

| | | |
|---|---|---|
| 03 | 2025/07/03 | ವಿಶ್ವವಿದ್ಯಾಲಯದ ಕಲಾ ನಿಖಾಯಕ್ಕೆ ಡೀನರನ್ನು ನೇಮಿಸಿ ಆದೇಶಿಸಿದ್ದನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ ಮಂಡಿಸುವ ಕುರಿತು. |
| ತೀರ್ಮಾನ | | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಕಲಾ ನಿಖಾಯದ ಡೀನರಾದ ಪ್ರೊ. ಡಿ. ಎಸ್. ಪಾಟೀಲ್, ಹಿರಿಯ ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ ಇವರು ಕರ್ನಾಟಕ ಸರ್ಕಾರದ ಆದೇಶದಂತೆ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಕುಲಸಚಿವರು(ಮೌಲ್ಯಮಾಪನ) ಹುದ್ದೆಯ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ. ಆದ್ದರಿಂದ, ಕರ್ನಾಟಕ ರಾಜ್ಯ ವಿಶ್ವವಿದ್ಯಾಯಗಳ ಅಧಿನಿಯಮ-2000, ಪರಿಚ್ಛೇದ 21(1) ರಂತೆ ದಿನಾಂಕ: 23.06.2025 ರಿಂದ ಅನ್ವಯವಾಗುವಂತೆ ಜೇಷ್ಠತೆ ಆಧಾರದ ಮೇಲೆ ಪ್ರೊ. ಸಿ. ಎಸ್. ವಾಘಮಾರೆ, ಪ್ರಾಧ್ಯಾಪಕರು, ಮರಾಠಿ ವಿಭಾಗ ಇವರನ್ನು ಕಲಾ ನಿಖಾಯಕ್ಕೆ ಡೀನರನ್ನಾಗಿ ನಾಮನಿರ್ದೇಶನ ಮಾಡಿ ಆದೇಶಿಸಲಾಗಿದೆ. ಸದರಿ ವಿಷಯವನ್ನು ಪರಿಶೀಲಿಸಿ ಸಿಂಡಿಕೇಟ್ ಸಭೆಯು ಅನುಸಮರ್ಥನೆ ನೀಡಿತು. |
| 04 | 2025/07/04 | ಬೋಧಕ/ಬೋಧಕೇತರ ಸಿಬ್ಬಂದಿಗಳು ಅಂತರ ವಿಶ್ವವಿದ್ಯಾಲಯ ಅಡಿಯಲ್ಲಿ ಇಲ್ಲಿಯವರೆಗೂ ವರ್ಗಾವಣೆಗೆ ನಿರಾಕ್ಷೇಪಣಾ ಪ್ರಮಾಣ ಪತ್ರ ನೀಡಲು ವಿನಂತಿಸಿರುವ ಕುರಿತು. |
| ತೀರ್ಮಾನ | | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಬೋಧಕ/ಬೋಧಕೇತರ ಸಿಬ್ಬಂದಿಗಳಿಗೆ ಅಂತರ ವಿಶ್ವವಿದ್ಯಾಲಯ ಅಡಿಯಲ್ಲಿ ವರ್ಗಾವಣೆಗಾಗಿ ಈಗಾಗಲೇ ನಿರಾಕ್ಷೇಪಣಾ ಪ್ರಮಾಣ ಪತ್ರ ನೀಡಿರುವ ಮತ್ತು ಪ್ರಸ್ತುತ ವಿನಂತಿಸಿರುವ ಮಾಹಿತಿಯನ್ನು ಈ ಕೆಳಕಾಣಿಸಿದಂತೆ ಸಭೆಗೆ ಮಂಡಿಸಲಾಯಿತು. ಸಿಬ್ಬಂದಿಗಳ ಮನವಿಗಳನ್ನು ಪರಿಶೀಲಿಸಿ ಹುದ್ದೆ ರಹಿತವಾಗಿ ನಿರಾಕ್ಷೇಪಣಾ ಪ್ರಮಾಣ ಪತ್ರ ನೀಡಲು ಹಾಗೂ ಸರ್ಕಾರದ ಅಂತರ ವಿಶ್ವವಿದ್ಯಾಲಯದ ವರ್ಗಾವಣೆ ಆದೇಶವಾದ ಒಂದು ವರ್ಷದ ಅವಧಿ ನಂತರ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಿಂದ ಬಿಡುಗಡೆಗೊಳಿಸಲು ಮತ್ತು ಸದರಿ ಎಲ್ಲ ನಿರಾಕ್ಷೇಪಣಾ ಪ್ರಮಾಣ ಪತ್ರಗಳ ಅವಧಿ ಒಂದು ವರ್ಷಕ್ಕೆ ಮಾತ್ರ ಸೀಮಿತವಾಗಿರುತ್ತವೆ ಎಂಬ ಷರತ್ತು ವಿಧಿಸಲು ಸಭೆಯು ತೀರ್ಮಾನಿಸಿತು.<br>ಮುಂದುವರೆದು, ಮುಂದಿನ ದಿನಗಳಲ್ಲಿ ವಿಶ್ವವಿದ್ಯಾಲಯದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ಅಂತರ ವಿಶ್ವವಿದ್ಯಾಲಯದಡಿ ನಿರಾಕ್ಷೇಪಣಾ ಪ್ರಮಾಣ ಪತ್ರಕ್ಕೆ ಅರ್ಜಿ ಸಲ್ಲಿಸಿದಲ್ಲಿ ಪರಿಗಣಿಸದೇ ಇರಲು ಸಭೆಯು ಸೂಚಿಸಿತು. |

| ಅ.ಸಂ. | ಸಿಬ್ಬಂದಿಗಳ ಹೆಸರು, ಹುದ್ದೆ ಮತ್ತು ವಿಭಾಗ | ವರ್ಗಾವಣೆ ಬಯಸಿದ ವಿಶ್ವವಿದ್ಯಾಲಯದ ವಿವರ |
|---|---|---|
| 01 | ಪ್ರೊ. ಪರಶುರಾಮ ಬನ್ನಿಗಿಡದ<br>ಪ್ರಾಧ್ಯಾಪಕರು<br>ಗಣಕ ವಿಜ್ಞಾನ ವಿಭಾಗ | ಗುಲಬರ್ಗಾ ವಿಶ್ವವಿದ್ಯಾಲಯ<br>ಕಲಬುರ್ಗಿ |
| 02 | ಡಾ. ಪಿ. ನಾಗರಾಜ<br>ಶಾ. ಕ. ಭಾ. ಅ. ಸಂಸ್ಥೆ | ಬೆಂಗಳೂರು ನಗರ ವಿಶ್ವವಿದ್ಯಾಲಯ<br>ಬೆಂಗಳೂರು |
| 03 | ಡಾ, ಟಿ ಆರ್. ಅರುಣಕುಮಾರ<br>ಸಹಾಯಕ ಪ್ರಾಧ್ಯಾಪಕರು<br>ಸಂ. ರಾ. ಪ್ರ. ದ. ಫ. ಮಹಾವಿದ್ಯಾಲಯ<br>(ಗಣಕ ವಿಜ್ಞಾನ ವಿಭಾಗ) | ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ |
| 04 | ಡಾ. ಮುಕುಂದ ಮುಂಡರಗಿ<br>ಸಹಾಯಕ ಪ್ರಾಧ್ಯಾಪಕರು<br>ಸಂ. ರಾ. ಪ್ರ. ದ. ಫ. ಮಹಾವಿದ್ಯಾಲಯ | ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ |
| 05 | ಡಾ. ಕನಕಪ್ಪ ಪೂಜಾರ<br>ಸಹಾಯಕ ಪ್ರಾಧ್ಯಾಪಕರು<br>ಶಿಕ್ಷಣ ವಿಭಾಗ | ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ |
| 06 | ಡಾ. ಹನಮಂತಪ್ಪ ಸಂಜೀವಣ್ಣನವರ<br>ಸಹಾಯಕ ಪ್ರಾಧ್ಯಾಪಕರು<br>ಶಾ. ಕ. ಭಾ. ಅ. ಸಂಸ್ಥೆ | ಹಾವೇರಿ ವಿಶ್ವವಿದ್ಯಾಲಯ |
| 07 | ಡಾ. ರಮೇಶ ಎಂ. ಎನ್<br>ಸಹ ಪ್ರಾಧ್ಯಾಪಕರು<br>ರಾಜ್ಯಶಾಸ್ತ್ರ ವಿಭಾಗ | ಬೆಂಗಳೂರು ವಿಶ್ವವಿದ್ಯಾಲಯ<br>ಕೋಲಾರ |

| | | | | |
|---|---|---|---|---|
| | | ಬೋಧಕೇತರ ಸಿಬ್ಬಂದಿಗಳು | | |
| | | 01 | ಶ್ರೀ. ಶೇಖರಗೌಡ ಪಾಟೀಲ<br>ಪ್ರಥಮ ದರ್ಜೆ ಸಹಾಯಕರು<br>ಪರೀಕ್ಷಾ ವಿಭಾಗ | ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ |
| | | 02 | ಶ್ರೀ. ಶಿವಾನಂದ ಉಪ್ಪಾರ<br>ಪ್ರಥಮ ದರ್ಜೆ ಸಹಾಯಕರು<br>ವಾಣಿಜ್ಯ ವಿಭಾಗ | ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ |
| | | 03 | ಪ್ರತಾಪ ವ್ಹಿ ಎಲ್<br>ಗಣಕಯಂತ್ರ ನಿರ್ವಾಹಕರು<br>ಸಮಾಜಶಾಸ್ತ್ರ ಮತ್ತು ಸಮಾಜಕಾರ್ಯ ವಿಭಾಗ | ಕುವೆಂಪು ವಿಶ್ವವಿದ್ಯಾಲಯ ಶಿವಮೊಗ್ಗ |
| | | 04 | ಶ್ರೀಮತಿ. ವಾಣಿ ಪೋತದಾರ<br>ಗಣಕಯಂತ್ರ ನಿರ್ವಾಹಕರು<br>ಪರೀಕ್ಷಾ ವಿಭಾಗ | ಬೆಂಗಳೂರು ನಗರ ವಿಶ್ವವಿದ್ಯಾಲಯ ಬೆಂಗಳೂರು |
| 05 | 2025/07/05 | ಶ್ರೀ ಬಸವರಾಜ ಮೋನಿಕಾ ಕನ್ನಿ ಶಿಕ್ಷಣ ಮಹಾವಿದ್ಯಾಲಯ, ವಿಜಯಪುರ ಇವರ 2024-25ನೇ ಸಾಲಿನ ಪ್ರವೇಶಾತಿ ಹಾಗೂ NCTE ಯಿಂದ Final Showcause Notice ಬಂದಿರುವ ಕುರಿತು. | | |
| | ತೀರ್ಮಾನ | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಶ್ರೀ ಬಸವರಾಜ ಮೋನಿಕಾ ಕನ್ನಿ ಶಿಕ್ಷಣ ಮಹಾವಿದ್ಯಾಲಯ, ವಿಜಯಪುರ ಇವರು **2023-24** ಮತ್ತು **2024-25**ನೇ ಸಾಲಿನ NCTE ಯಿಂದ ಸಂಯೋಜನೆ ಮುಂದುವರಿಕೆಯ ಆದೇಶ ಪ್ರತಿಯನ್ನು ವಿಶ್ವವಿದ್ಯಾಲಯಕ್ಕೆ ನೀಡಿರುವುದಿಲ್ಲ. ಈ ಕುರಿತಾಗಿ ಪರಿಶೀಲಿಸಲು ತಜ್ಞರ ಸಮಿತಿಯನ್ನು ರಚಿಸಲಾಗಿತ್ತು. ಸದರಿ ಸಮಿತಿಯು ನೀಡಿದ ವರದಿಯನ್ನು ದಿನಾಂಕ: **06.06.2025** ರಂದು ಜರುಗಿದ ವಿದ್ಯಾವಿಷಯಕ್ ಪರಿಷತ್ ಸಭೆಯಲ್ಲಿ ಮಂಡಿಸಲಾಗಿದ್ದು, ಸಭೆಯು NCTE Continuation Order ಪ್ರತಿಯನ್ನು ಶೀಘ್ರದಲ್ಲಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸುವಂತೆ ಮಹಾವಿದ್ಯಾಲಯದವರಿಗೆ ಅಂತಿಮ ನೋಟಿಸ್ ಜಾರಿ ಮಾಡಲು ತೀರ್ಮಾನಿಸಿತ್ತು. ಅದರಂತೆ, ಸದರಿ ಮಹಾವಿದ್ಯಾಲಯಕ್ಕೆ Final Showcause Notice ಜಾರಿ ಮಾಡಲಾಗಿದೆ. ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿ ಅನುಸಮರ್ಥನೆ ನೀಡಿತು. | | |
| 06 | 2025/07/06 | ಬಿ.ಇಡಿ ಪ್ರವೇಶಾತಿ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳಿಂದ ಹೆಚ್ಚುವರಿ ಶುಲ್ಕವನ್ನು ಪಡೆಯುತ್ತಿದ್ದಾರೆ ಎಂದು ದಲಿತ ವರ್ಗದ ವಿದ್ಯಾರ್ಥಿಗಳು ವಿಶ್ವವಿದ್ಯಾಲಯಕ್ಕೆ ದೂರು ನೀಡಿರುವ ಕುರಿತಂತೆ ಸಮಿತಿ ನೀಡಿರುವ ವರದಿ ಬಗ್ಗೆ. | | |
| | ತೀರ್ಮಾನ | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಬರುವ ವಿಜಯಪುರ ಜಿಲ್ಲೆಯ ಶ್ರೀಮತಿ ಮೀನಾಕ್ಷಿ ಆರ್. ಕಲ್ಲೂರ, ವಿದ್ಯಾವರ್ಧಕ ಸಂಘ (ಬಿ.ಎಡ್.ಮಹಾವಿದ್ಯಾಲಯ), ವಿಜಯಪುರ ಹಾಗೂ ಕುಮಾರಿ ಮೋನಿಕಾ ಬಸವರಾಜ ಕನ್ನಿ ಬಿ.ಎಡ್. ಮಹಾವಿದ್ಯಾಲಯ, ಅಥಣಿ ರಸ್ತೆ, ವಿಜಯಪುರ ಈ ಮಹಾವಿದ್ಯಾಲಯಗಳಲ್ಲಿ ಪ್ರವೇಶಾತಿ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳಿಂದ ಹೆಚ್ಚುವರಿ ಶುಲ್ಕವನ್ನು ಪಡೆಯುತ್ತಿದ್ದಾರೆ ಎಂದು ದಲಿತ ವರ್ಗದ ವಿದ್ಯಾರ್ಥಿಗಳು ವಿಶ್ವವಿದ್ಯಾಲಯಕ್ಕೆ ದೂರು ನೀಡಿರುತ್ತಾರೆ. ಅದರನ್ವಯ ದಿನಾಂಕ: **06.12.2024** ರ ಸಿಂಡಿಕೇಟ್ ಸಭೆಯ ತೀರ್ಮಾನದನ್ವಯ ಶ್ರೀ ರಫೀ ಭಂಡಾರಿ ಇವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಗಿತ್ತು. ಸದರಿ ಸಮಿತಿ ಮಹಾವಿದ್ಯಾಲಯಗಳಿಗೆ ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಸಭೆಗೆ ಪ್ರಸ್ತುತಪಡಿಸಲಾಯಿತು.<br>ಸದಸ್ಯರಾದ ಶ್ರೀ ವಿನೀತ ಜೋಶಿ ಇವರು ಸದರಿ ಮಹಾವಿದ್ಯಾಲಯಗಳಲ್ಲಿ ಕಟ್ಟಡ, ಪರಿಣಿತ ಬೋಧಕ ಸಿಬ್ಬಂದಿಗಳು ಇರುವುದಿಲ್ಲ. ಕೇವಲ ಪ್ರವೇಶಾತಿ ಸಂದರ್ಭದಲ್ಲಿ ಶುಲ್ಕವನ್ನು ಪಡೆದು ಪರೀಕ್ಷೆ ನಡೆಸಲಾಗುತ್ತಿದೆ. ಯಾವುದೇ ಬೋಧನಾ ಕಾರ್ಯ ಜರುಗುತ್ತಿಲ್ಲ ಎಂಬ ಮಾಹಿತಿಯನ್ನು ಸಭೆಗೆ ನೀಡಿದರು.<br>ಸಮಿತಿಯು ಸಲ್ಲಿಸಿದ ವರದಿಯನ್ನು ಪರಿಶೀಲಿಸಿ, ಶ್ರೀಮತಿ ಮೀನಾಕ್ಷಿ ಆರ್. ಕಲ್ಲೂರ, ವಿದ್ಯಾವರ್ಧಕ ಸಂಘ (ಬಿ.ಎಡ್.ಮಹಾವಿದ್ಯಾಲಯ), ವಿಜಯಪುರ ಹಾಗೂ ಕುಮಾರಿ ಮೋನಿಕಾ ಬಸವರಾಜ ಕನ್ನಿ ಬಿ.ಎಡ್. ಮಹಾವಿದ್ಯಾಲಯ, ಅಥಣಿ ರಸ್ತೆ, ವಿಜಯಪುರ ಈ ಮಹಾವಿದ್ಯಾಲಯಗಳನ್ನು **2025-26** ಶೈಕ್ಷಣಿಕ ಸಾಲಿನಿಂದ ಪ್ರವೇಶಾತಿಗೆ ಅವಕಾಶ ಕಲ್ಪಿಸದೇ **03** ವರ್ಷ ಅವಧಿಗೆ ಅಮಾನತ್ತಿನಲ್ಲಿಡಲು ಹಾಗೂ **30** ಲಕ್ಷ ದಂಡ ವಿಧಿಸಲು | | |

| | | |
|---|---|---|
| | | ಸಭೆಯು ತೀರ್ಮಾನಿಸಿತು. ಮುಂದುವರೆದು, ಹಿಂದಿನ ಶೈಕ್ಷಣಿಕ ವರ್ಷದಲ್ಲಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳನ್ನು ಸಮೀಪದ ಮಹಾವಿದ್ಯಾಲಯಗಳಲ್ಲಿ ವರ್ಗಾಯಿಸಲು ಸಭೆ ತೀರ್ಮಾನಿಸಿತು. |
| 07 | 2025/07/07 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿರುವ PG Diploma Course ಗಳನ್ನು ಮುಂದುವರೆಸುವ ಕುರಿತು. |
| | ತೀರ್ಮಾನ | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿರುವ Ambedkar Studies, Forensic Science, Vachana Studies ಮತ್ತು Translation PG Diploma Course ಗಳನ್ನು ಮುಂದುವರೆಸಲು ಸಭೆಯು ಅನುಮೋದನೆ ನೀಡಿತು.<br>ಮುಂದುವರೆದು, ಪ್ರವೇಶಾತಿ ಕಡಿಮೆ ಇರುವುದರಿಂದ PG Diploma Course ಗಳ ಪ್ರವೇಶಾತಿಯಿಂದ ವಿದ್ಯಾರ್ಥಿಗಳಿಗೆ ಆಗಬಹುದಾದ ಅನುಕೂಲ ಮತ್ತು ಮಹತ್ವದ ಮಾಹಿತಿ ಕುರಿತಾಗಿ ಪತ್ರಿಕಾ ಪ್ರಕಟಣೆ ಮತ್ತು ಸಾಮಾಜಿಕ ಮಾಧ್ಯಮಗಳಲ್ಲಿ(Social Media) ಗಳಲ್ಲಿ ಜಾಹೀರಾತು ನೀಡುವುದು ಹಾಗೂ ಪದವಿ ಮಹಾವಿದ್ಯಾಲಯಗಳಲ್ಲಿನ ವಿದ್ಯಾರ್ಥಿಗಳಿಗೆ ಮಾಹಿತಿಯನ್ನು ನೀಡಲು ಸಭೆಯು ಸೂಚಿಸಿತು. |
| 08 | 2025/07/08 | 2025-26ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಪ್ರವೇಶಾತಿ ಪ್ರಕ್ರಿಯೆಯಲ್ಲಿ ತೃತೀಯ ಲಿಂಗಿಯ ಹಾಗೂ ಕೋವಿಡ್‌ನಿಂದ ತಂದೆ/ತಾಯಿಯನ್ನು ಕಳೆದುಕೊಂಡವರ ವಿದ್ಯಾರ್ಥಿಗಳಿಗೆ ಪ್ರವೇಶಾತಿಯಲ್ಲಿ 01 ಸ್ಥಳವನ್ನು ಕಾಯ್ದಿರಿಸುವ ಕುರಿತು. |
| | ತೀರ್ಮಾನ | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ **2025-26ನೇ** ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಪ್ರವೇಶಾತಿ ಪ್ರಕ್ರಿಯೆಯಲ್ಲಿ Other Quota Reservations (Supernumerary Quota) ದ ಅಡಿಯಲ್ಲಿ ತೃತೀಯ ಲಿಂಗಿಯ ವಿದ್ಯಾರ್ಥಿಗಳಿಗೆ-**01** ಹಾಗೂ ಕೋವಿಡ್‌ನಿಂದ ತಂದೆ/ತಾಯಿಯನ್ನು ಕಳೆದುಕೊಂಡ ವಿದ್ಯಾರ್ಥಿಗಳಿಗೆ-**01** ಸ್ಥಳವನ್ನು ಪ್ರವೇಶಾತಿ ಮಿತಿಯಲ್ಲಿ(Seat Matrix) ನಲ್ಲಿ ಕಾಯ್ದಿರಿಸಲು ಹಾಗೂ ಪ್ರವೇಶಾತಿ ಶುಲ್ಕಗಳನ್ನು ಆಕರಿಸಲು ಸಭೆಯು ತೀರ್ಮಾನಿಸಿತು. |
| 09 | 2025/07/09 | ಸ್ನಾತಕ ವಿಭಾಗಗಳ NEP ಪಠ್ಯಕ್ರಮದಿಂದ ನೂತನ ಪಠ್ಯಕ್ರಮಕ್ಕೆ ಮರುಪ್ರವೇಶಾತಿ ನಿಯಮಾವಳಿಯನ್ನು ಅನುಮೋದಿಸುವ ಕುರಿತು. |
| | ತೀರ್ಮಾನ | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ NEP ಪಠ್ಯಕ್ರಮವನ್ನು ಅರ್ಧದಲ್ಲಿಯೇ ಮೊಟಕುಗೊಳಿಸಿದ ವಿದ್ಯಾರ್ಥಿಗಳಿಗೆ ನೂತನ ಪಠ್ಯಕ್ರಮಕ್ಕೆ (SEP) 3ನೇ ಸೆಮಿಸ್ಟರ್‌ಗೆ ಮರುಪ್ರವೇಶ ನೀಡುವುದಕ್ಕೆ ಸಂಬಂಧಿಸಿದಂತೆ ನಿಯಮಾವಳಿ REGULATIONS GOVERNING ADMISSION FROM NEP SCHEME TO REVISED CURRICULUM STRUCTURE FOR UNDER GRADUTE DEGREE PROGRAMMES-2024 ನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು. |
| 10 | 2025/07/10 | ಅಂತಿಮ ವರ್ಷದ ಪ್ರವೇಶಾತಿ ಪಡೆದ ಲಿಂಗತ್ವ ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಯಾದ ಕು. ರಾಮಕುಮಾರ ಸುಣಗಾರ(ಟ್ರಾನ್ಸ್ ಜೆಂಡರ್) ಇವರಿಗೆ ಉಚಿತ ಲ್ಯಾಪ್‌ಟಾಪ್ ನೀಡುವ ಕುರಿತು |
| | ತೀರ್ಮಾನ | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸಮಾಜಕಾರ್ಯ ಅಧ್ಯಯನ ವಿಭಾಗದಲ್ಲಿ ಅಂತಿಮ ವರ್ಷದ ವ್ಯಾಸಂಗ ಮಾಡುತ್ತಿರುವ ಲಿಂಗತ್ವ ಅಲ್ಪಸಂಖ್ಯಾತರ(ಟ್ರಾನ್ಸ್ ಜೆಂಡರ್) ಸಮುದಾಯದ ವಿದ್ಯಾರ್ಥಿಯಾದ ಕು. ರಾಮಕುಮಾರ ಸುಣಗಾರ ಇವರು ತಮ್ಮ ಸಮುದಾಯದ ಸಾವಾಲಿ ಫೌಂಡೇಶನ ವತಿಯಿಂದ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಮಹಿಳಾ ಸಬಲೀಕರಣ ಕೋಶಕ್ಕೆ ತಮ್ಮ ಸಮುದಾಯದ ವಿದ್ಯಾರ್ಥಿಗಳು ಉನ್ನತ ಶಿಕ್ಷಣದ ಸ್ನಾತಕೋತ್ತರ ಪದವಿ ಪ್ರವೇಶಾತಿಯಲ್ಲಿ ಲಿಂಗತ್ವ ಅಲ್ಪಸಂಖ್ಯಾತರ(ಟ್ರಾನ್ಸ್ ಜೆಂಡರ್) ಎಂಬ ಪ್ರತ್ಯೇಕ ಕೋಟಾ ವ್ಯವಸ್ಥೆ ಮತ್ತು ತಮ್ಮ ಸಮುದಾಯದ ವಿದ್ಯಾರ್ಥಿಗೆ ಉಚಿತ ಲ್ಯಾಪ್‌ಟ್ಯಾಪ್ ನೀಡಲು ಸದಸ್ಯ ಕಾರ್ಯದರ್ಶಿಗಳು, ಮಹಿಳಾ ಸಬಲೀಕರಣ ಕೋಶ, ರಾಚವಿ ಇವರ ಮುಖಾಂತರ ಮನವಿಯನ್ನು ಸಲ್ಲಿಸಿರುತ್ತಾರೆ. ಮುಂದುವರೆದು, ತೃತೀಯ ಲಿಂಗಿಗಳ ಶೈಕ್ಷಣಿಕ ಉನ್ನತಿಯನ್ನು ಪ್ರೋತ್ಸಾಹಿಸಲು ಕಾಲೇಜು ಶಿಕ್ಷಣ ಇಲಾಖೆಯಿಂದ ಈಗಾಗಲೇ ಅವರು ಯಾವುದೇ ಸಮುದಾಯಕ್ಕೆ ಸೇರಿದ್ದರು ಎಸ್.ಸಿ ಮತ್ತು ಎಸ್.ಟಿ ವಿದ್ಯಾರ್ಥಿಗಳಿಗೆ ನೀಡುವ ಶುಲ್ಕ ವಿನಾಯಿತಿ ಕಲ್ಪಿಸಲು ಅವಕಾಶ ಕಲ್ಪಿಸಿ ಸುತ್ತೋಲೆ ಹೊರಡಿಸಿರುತ್ತಾರೆ. ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಅವಕಾಶ ಕಲ್ಪಿಸಿದಲ್ಲಿ ಇದು ನ್ಯಾಕ್ ಮಾನ್ಯತೆಗೂ ಮತ್ತು ಸಮುದಾಯದ |

| | | |
|---|---|---|
| | | ಶೈಕ್ಷಣಿಕ ಪ್ರಗತಿಗೆ ಅನುಕೂಲವಾಗಲಿದ್ದು, ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ಈಗಾಗಲೇ ಕು. ರಾಮಕುಮಾರ ಸುಣಗಾರ(ಟ್ರಾನ್ಸ್ ಜೆಂಟರ್) ಇವರಿಗೆ ಉಚಿತ ಲ್ಯಾಪ್‌ಟಾಪ್ ನೀಡಲಾಗಿದೆ. ಸದರಿ ವಿಷಯವನ್ನು ಪರಿಶೀಲಿಸಿ ಸಭೆಯು ಅನುಸಮರ್ಥನೆ ನೀಡಿತು. |
| 11 | 2025/07/11 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಹಾಗೂ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದಲ್ಲಿ ಹೊಸದಾಗಿ ಎ.ಐ. ಲ್ಯಾಬ್‌ನ್ನು ಸ್ಥಾಪಿಸಲು ಸಂಕ್ಷಿಪ್ತ ಟಿಪ್ಪಣಿ ಸಲ್ಲಿಸುವ ಕುರಿತು. |
| ತೀರ್ಮಾನ | | ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಹಾಗೂ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದಲ್ಲಿ ಹೊಸದಾಗಿ ಎ.ಐ. ಲ್ಯಾಬ್‌ನ್ನು ಸ್ಥಾಪಿಸುವುದರಿಂದ ವಿಶ್ವವಿದ್ಯಾಲಯದ ಸಿಬ್ಬಂದಿಗಳು, ವಿದ್ಯಾರ್ಥಿಗಳು, ಮತ್ತು ಸಂಶೋಧನಾರ್ಥಿಗಳಿಗೆ ಆಗುವ ಪ್ರಯೋಜನಗಳು, ಲ್ಯಾಬ್‌ನ ಮಹತ್ವ, ಉದ್ದೇಶಗಳು ಕುರಿತಾಗಿ ಸಂಕ್ಷಿಪ್ತ ವರದಿಯನ್ನು ಸಭೆಗೆ ಪ್ರಸ್ತುತಪಡಿಸಲಾಯಿತು.<br>ಪ್ರಾಯೋಗಿಕವಾಗಿ ಪ್ರತಿಯೊಂದು ಕ್ಷೇತ್ರದಲ್ಲೂ ಎ.ಐ. ಎಂಬುದು ಹಲವಾರು ಆವಿಷ್ಕಾರಗಳಿಗೆ ಶಕ್ತಿಯಾಗಿದೆ. ಬಹುಪಾಲು ಸಮಸ್ಯೆಗಳನ್ನು ಪರಿಹರಿಸಲು ಸಹಕಾರಿಯಾಗಿದೆ. ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗಳ ಕೌಶಲ್ಯ ಅಭಿವೃದ್ಧಿ, ವೃತ್ತಿ ಜೀವನಕ್ಕೆ ಹೆಚ್ಚಿನ ಅನುಕೂಲಕರವಾಗುವುದು ಎಂದು ಸದಸ್ಯರುಗಳು ಅಭಿಪ್ರಾಯ ವ್ಯಕ್ತಿಪಡಿಸಿದ ಹಿನ್ನೆಲೆಯಲ್ಲಿ, ವಿಶ್ವವಿದ್ಯಾಲಯಕ್ಕೆ ಯಾವುದೇ ಆರ್ಥಿಕ ಹೊರೆಯಾಗದಂತೆ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಹಾಗೂ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದಲ್ಲಿ ಹೊಸದಾಗಿ ಎ.ಐ. ಲ್ಯಾಬ್‌ನ್ನು ಸ್ಥಾಪಿಸಲು ಸಭೆಯು ತೀರ್ಮಾನಿಸಿತು.<br>ಮುಂದುವರೆದು, ಕ್ರಿಸ್ತ ವಿಶ್ವವಿದ್ಯಾಲಯ, ಬೆಂಗಳೂರು ಇಲ್ಲಿ ಈಗಾಗಲೇ A.I. Language Lab ಇದ್ದು, ಎ.ಐ. ಲ್ಯಾಬ್ ಕುರಿತಾಗಿ ಹೆಚ್ಚಿನ ಮಾಹಿತಿಯನ್ನು ಸಿಂಡಿಕೇಟ್ ಸದಸ್ಯರುಗಳಿಗೆ ನೀಡಲು ಬೆಂಗಳೂರಿಗೆ ಭೇಟಿ ನೀಡಲು ಹಾಗೂ ಸಿಂಡಿಕೇಟ್ ಸದಸ್ಯರು, ಡೀನರು ಮತ್ತು ಪ್ರಾಧ್ಯಾಪಕರುಗಳಿಗೆ ಇದಕ್ಕೆ ಸಂಬಂಧಿಸಿದ ಒಂದು ದಿನದ Orinentation Programme ನ್ನು ಕೂಡ ಆಯೋಜಿಸಲು ಸಭೆಯು ತೀರ್ಮಾನಿಸಲಾಯಿತು. |
| 12 | 2025/07/12 | Technical Advisory Committee ಯನ್ನು ರಚಿಸಿದ್ದು, ಸಿಂಡಿಕೇಟ್ ಸಭೆಯ ಅನುಸಮರ್ಥನೆಗೆ ಮಂಡಿಸುವ ಕುರಿತು. |
| ತೀರ್ಮಾನ | | ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಭೂತರಾಮನಹಟ್ಟಿ, ಹಿರೇಬಾಗೇವಾಡಿಯ ನೂತನ ಆವರಣ, ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿ ಹಾಗೂ ಸ್ನಾತಕೋತ್ತರ ಕೇಂದ್ರ, ವಿಜಯಪುರ ಇವುಗಳಲ್ಲಿ ಇಂಜಿನೀಯರಿಂಗ್ ಸಿವಿಲ್ ಕಾರ್ಯಗಳನ್ನು ಕೈಗೊಳ್ಳಲು Executive Engineer/Assistant Executive Engineer ಹಂತದ ಅಧಿಕಾರಿಗಳ ನಿಯೋಜನೆ ಇರುವುದಿಲ್ಲ. ವಿಶ್ವವಿದ್ಯಾಲಯದಲ್ಲಿ ಅತೀ ತುರ್ತಾಗಿ ಸಿವಿಲ್ ಕಾರ್ಯಗಳನ್ನು ಕೈಗೊಳ್ಳಬೇಕಾಗಿದ್ದು, ಪ್ರಸ್ತುತ Resident Engineer, Assistant Engineer ಗಳ ಮೂಲಕ ಕಾಮಗಾರಿ ಕೈಗೆತ್ತಿಕೊಳ್ಳಲು ವಿವಿಧ ಹಂತಗಳಲ್ಲಿ ಪರಿಶೀಲಿಸಬೇಕಾಗಿರುವುದರಿಂದ Technical Advisory Committee ಯನ್ನು ರಚಿಸುವುದು ಅವಶ್ಯವಿದ್ದ ಕಾರಣ ನಿವೃತ್ತ ಇಂಜಿನೀಯರಗಳನ್ನೊಳಗೊಂಡು ವಿಶ್ವವಿದ್ಯಾಲಯದ ಮಟ್ಟದ "ತಾಂತ್ರಿಕ ಸಲಹಾ ಸಮಿತಿ" ಯನ್ನು ರಚಿಸಲಾಗಿದೆ. ಸದರಿ "ತಾಂತ್ರಿಕ ಸಲಹಾ ಸಮಿತಿ" ಯನ್ನು ರಚಿಸಿರುವ ವಿಷಯಕ್ಕೆ ಸಭೆಯು ಅನುಸಮರ್ಥನೆ ನೀಡಿತು.<br>ಮುಂದುವರೆದು ಸದರಿ "ತಾಂತ್ರಿಕ ಸಲಹಾ ಸಮಿತಿ"ಯಲ್ಲಿ ಸದಸ್ಯರುಗಳಾದ ಶ್ರೀ ವಿನೀತ್ ಜೋಶಿ ಮತ್ತು ಡಾ. ಮಾರುತಿ ಎಚ್. ಮುಂಡರಗಿ ಇವರುಗಳನ್ನು ಪೂರ್ಣ ಪ್ರಮಾಣದ "Ex-Offician Member"ಆಗಿ ನೇಮಿಸಲಾಯಿತು. |
| 13 | 2025/07/13 | APD, ಬೆಂಗಳೂರು, ಇವರು ವಿಕಲಚೇತನ ವ್ಯಕ್ತಿಗಳ ಪುನರ್ ವಸತಿಗಾಗಿ ಸಮುದಾಯ ಅಭಿವೃದ್ಧಿ ಕೇಂದ್ರವನ್ನು ಸ್ನಾತಕೋತ್ತರ ಕೇಂದ್ರ, ವಿಜಯಪುರದಲ್ಲಿ ಸ್ಥಾಪಿಸಲು ಅನುಮತಿ ನೀಡುವ ಕುರಿತು. |
| ತೀರ್ಮಾನ | | APD, ಬೆಂಗಳೂರು, ಇವರು ವಿಕಲಚೇತನ ವ್ಯಕ್ತಿಗಳ ಪುನರ್ ವಸತಿಗಾಗಿ ಸಮುದಾಯ ಅಭಿವೃದ್ಧಿ ಕೇಂದ್ರವನ್ನು(Community Development Centre) ಸ್ನಾತಕೋತ್ತರ ಕೇಂದ್ರ, ವಿಜಯಪುರದಲ್ಲಿ |

| | | |
|---|---|---|
| | | ಸ್ಥಾಪಿಸುವ ಪ್ರಸ್ತಾವನೆಯನ್ನು ಸಭೆಗೆ ಮಂಡಿಸಲಾಯಿತು.<br>ವಿಶೇಷ ಆಹ್ವಾನಿತರಾಗಿ ಆಗಮಿಸಿದ APD, ಯ ಪದಾಧಿಕಾರಿಗಳು, ಈ ಸಂಸ್ಥೆಯು 1959 ರಲ್ಲಿ ಪ್ರಾರಂಭಿಸಲಾಗಿದ್ದು 67 ವರ್ಷಗಳ ಇತಿಹಾಸ ಹೊಂದಿದ್ದು, ವಿಕಲಚೇತನರನ್ನು ಮುಖ್ಯ ವಾಹಿನಿಗೆ ತರುವುದು ಇದರ ಉದ್ದೇಶವಾಗಿದೆ. ವಿಕಲಚೇತನರ ಸಮಸ್ಯೆಗಳನ್ನು ಪತ್ತೆ ಹಚ್ಚಿ ಶಿಕ್ಷಣ, ಪುನರ್ವಸತಿ, ಉದ್ಯೋಗಾಭಿವೃದ್ಧಿ ತರಬೇತಿ ನೀಡಲಾಗುತ್ತಿದೆ. ಮಾನಸಿಕ ಅಸ್ವಸ್ತರನ್ನು ಗುರುತಿಸಿ ಚಿಕಿತ್ಸೆ ನೀಡುವುದು. ಬೆನ್ನು ಅಪಘಾತ ಆದಂತಹ ವ್ಯಕ್ತಿಗಳನ್ನು ಪತ್ತೆ ಹಚ್ಚಿ ಚಿಕಿತ್ಸೆ ನೀಡಿ Wheel Chair ನಲ್ಲಿ ಮಾಡುವಂತಹ ಉದ್ಯೋಗಗಳನ್ನು ನೀಡಿ ಬದುಕು ಕಟ್ಟಿ ಕೊಡಲು ಅವಕಾಶ ಕಲ್ಪಿಸಲಾಗುತ್ತಿದೆ. ಹೀಗೆ APD, ಬೆಂಗಳೂರು, ಇವರು ವಿಕಲಚೇತನರ ಕಲ್ಯಾಣಕ್ಕಾಗಿ ಒದಗಿಸುವ ಸೇವೆಗಳನ್ನು ಹಂತ-ಹಂತವಾಗಿ ಸಭೆಗೆ ವಿವರಿಸಿದರು.<br>ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿದ ಸಭೆಯು ವಿಶ್ವವಿದ್ಯಾಲಯದ ಸಮಾಜಶಾಸ್ತ್ರ ಮತ್ತು ಸಮಾಜಕಾರ್ಯ ವಿಭಾಗದ ವಿದ್ಯಾರ್ಥಿಗಳಿಗೂ ಅಧ್ಯಯನಕ್ಕೆ ಅನುಕೂಲವಾಗುವುದು ಮತ್ತು ವಿಕಲಚೇತನರ ಶ್ರೇಯೋಭಿವೃದ್ಧಿ ದೃಷ್ಠಿಯಿಂದ ವಿಕಲಚೇತನ ವ್ಯಕ್ತಿಗಳ ಪುನರ್ ವಸತಿಗಾಗಿ ಸಮುದಾಯ ಅಭಿವೃದ್ಧಿ ಕೇಂದ್ರವನ್ನು(Community Development Centre) ಸ್ನಾತಕೋತ್ತರ ಕೇಂದ್ರ, ವಿಜಯಪುರದಲ್ಲಿ ಸ್ಥಾಪಿಸಲು ಸಭೆಯು ತೀರ್ಮಾನಿಸಿತು. |
| 14 | 2025/07/14 | ಮುಖ್ಯ ಆವರಣದ ಭೂಮಿಯನ್ನು ವಿಶ್ವವಿದ್ಯಾಲಯಕ್ಕೆ ಉಳಿಸಿಕೊಳ್ಳಲು ಅಗತ್ಯ ಪ್ರಸ್ತಾವನೆ ಸಲ್ಲಿಸುವ ಕುರಿತು, ಈ ಜಮೀನಿಗೆ ಸಂಬಂಧಿಸಿದಂತೆ ಇಲ್ಲಿಯವರೆಗೂ ಆದಂತಹ ಬೆಳವಣಿಗೆ ಬಗ್ಗೆ ಚರ್ಚಿಸುವ ಕುರಿತು. |
| ತೀರ್ಮಾನ | | **ದಿನಾಂಕ:10.06.2025** ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ಪ್ರಸ್ತುತ ಭೂತರಾಮನಹಟ್ಟಿಯ 43 ಎಕರೆ ಜಮೀನನ್ನು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸ್ವಾಯತ್ತದಲ್ಲಿ ಉಳಿಸಿಕೊಳ್ಳುವ ವಿಷಯವನ್ನು ಮಾನ್ಯ ಜಿಲ್ಲಾ ಉಸ್ತುವರಿ ಸಚಿವರ ಗಮನಕ್ಕೆ ತಂದು ಮುಂದಿನ ಕ್ರಮ ಕೈಗೊಳ್ಳಲು ತೀರ್ಮಾನಿಸಲಾಗಿತ್ತು. ಅದರಂತೆ, "ಬಸವರಾಜ ಕಟ್ಟಿಮನಿ ಕಾದಂಬರಿ ಪ್ರಶಸ್ತಿ" ಪ್ರದಾನ ಸಮಾರಂಭದ ನಂತರ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದಲ್ಲಿ ಚರ್ಚಿಸಿ, ದಿನಾಂಕ: **30.06.2025** ರಂದು ಮಾನ್ಯರ ಸಹಮತಿ ಪಡೆದಿದ್ದುದರ ಬಗ್ಗೆ ಮಾಹಿತಿಯನ್ನು ಕುಲಸಚಿವರ ಸಭೆಗೆ ನೀಡಿದರು. ಮುಂದುವರೆದು, ಕೇಂದ್ರ ಸರ್ಕಾರದ "PARIVESH" ಪೋರ್ಟಲ್‌ನಲ್ಲಿ ಇಲ್ಲಿರುವ **169.10** ಗುಂಟಾ ಜಮೀನನ್ನು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸ್ವಾಯತ್ತದಲ್ಲಿ ಉಳಿಸಿಕೊಳ್ಳಲು ಅರ್ಜಿ ಸಲ್ಲಿಸಲಾಗುವುದು. ಮಾನ್ಯ ಜಿಲ್ಲಾಧಿಕಾರಿಗಳು, ಬೆಳಗಾವಿ ಇವರೊಂದಿಗೆ ಚರ್ಚಿಸಿ **169.10** ಗುಂಟಾ ಜಮೀನನ್ನು ಉಳಿಸಿಕೊಳ್ಳಲು ಪ್ರಯತ್ನಿಸಲಾಗುವುದು, ಸಾಧ್ಯವಾಗದೇ ಹೋದರೆ ಯೋಜನೆ **2** ನೇ ರೂಪದಲ್ಲಿ **35** ಎಕರೆ, **45**, ಎಕರೆ, **60**, ಎಕರೆ, **70** ಎಕರೆ ಜಮೀನನ್ನು ಹೀಗೆ ಬೇರೆ ಬೇರೆ ವಿಧಾನದಲ್ಲಿ ಅಗತ್ಯ ನಕ್ಷೆ ಸರ್ವೇ ಸಿದ್ಧಪಡಿಸಿದ್ದು ಜಿಲ್ಲಾಧಿಕಾರಿಗಳೊಂದಿಗೆ ಚರ್ಚಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಕುಲಸಚಿವರು ಸಭೆಗೆ ತಿಳಿಸಿದರು. ಸದರಿ ವಿಷಯಕ್ಕೆ ಸಭೆಯು ಅನುಸಮರ್ಥನೆ ನೀಡಿತು.<br>ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಭೂತರಾಮನಹಟ್ಟಿಯಲ್ಲಿರುವ ಜಮೀನನ್ನು ಸ್ವಾಯತ್ತದಲ್ಲಿ ಉಳಿಸಿಕೊಳ್ಳಲು ವಿಶ್ವವಿದ್ಯಾಲಯದ ಆಡಳಿತವು ತೆಗೆದುಕೊಳ್ಳುವ ನಿರ್ಧಾರಕ್ಕೆ ಎಲ್ಲ ಸಿಂಡಿಕೇಟ್ ಸದಸ್ಯರುಗಳ ಸಮ್ಮತಿ ಇರುತ್ತದೆ ಎಂದು ಸದಸ್ಯರಾದ ಶ್ರೀ. ಮಹಾಂತೇಶ ಕಂಬಾರ ಇವರು ಸಭೆಗೆ ತಿಳಿಸಿದರು. ಸದರಿ ವಿಷಯಕ್ಕೆ ಸಭೆಯು ಅನುಸಮರ್ಥನೆ ನೀಡಿತು. |
| 15 | 2025/07/15 | 2025–26ನೇ ಶೈಕ್ಷಣಿಕ ಸಾಲಿನಿಂದ ಕೆ.ಎಲ್.ಇ. ಸಂಸ್ಥೆಯ ರಾಜಾ ಲಖಮಗೌಡ ವಿಜ್ಞಾನ ಮಹಾವಿದ್ಯಾಲಯ(ಸ್ವಾಯತ್ತ) ಮಹಾವಿದ್ಯಾಲಯದ ಎಂ.ಸಿ.ಎ. ಕೋರ್ಸಿಗೆ ಪ್ರವೇಶ ಮಿತಿ ಹೆಚ್ಚಳ ಮಾಡುವ ಕುರಿತು ಸಲ್ಲಿಸಿದ ಪ್ರಸ್ತಾವನೆಗೆ ಅನುಮೋದನೆ ನೀಡುವ ಕುರಿತು. |
| ತೀರ್ಮಾನ | | ದಿನಾಂಕ: **06.06.2025** ರ ವಿದ್ಯಾವಿಷಯಕ್ ಪರಿಷತ್ ಸಭೆ ಹಾಗೂ ದಿನಾಂಕ: **10.06.2025** ರ ಸಿಂಡಿಕೇಟ್ ಸಭೆಯಲ್ಲಿ ಕೆ.ಎಲ್.ಇ. ಸಂಸ್ಥೆಯ ರಾಜಾ ಲಖಮಗೌಡ ವಿಜ್ಞಾನ ಮಹಾವಿದ್ಯಾಲಯ(ಸ್ವಾಯತ್ತ) ಮಹಾವಿದ್ಯಾಲಯದ ಎಂ.ಸಿ.ಎ. ಕೋರ್ಸಿಗೆ ಪ್ರವೇಶ ಮಿತಿಯನ್ನು **40** ಕ್ಕೆ ನಿಗದಿಪಡಿಸಲು ತೀರ್ಮಾನಿಸಲಾಗಿದೆ. ಮುಂದುವರೆದು, ಸದರಿ ಮಹಾವಿದ್ಯಾಲಯದ ಪ್ರಾಚಾರ್ಯರು, ಬಿ.ಸಿ.ಎ. ಕೋರ್ಸ್‌ನಲ್ಲಿ ಒಟ್ಟು **280** ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ ಹಾಗೂ ಸಂಸ್ಥೆಯು ಸಾಕಷ್ಟು ಮೂಲಭೂತ ಸೌಕರ್ಯಗಳನ್ನು ಹೊಂದಿರುವುದರಿಂದ ಮತ್ತು ವಿದ್ಯಾರ್ಥಿಗಳ ಬೇಡಿಕೆ ಕೂಡ ಇರುವುದರಿಂದ |

| | | |
|---|---|---|
| | | ಹೆಚ್ಚುವರಿಯಾಗಿ ಪ್ರವೇಶ ಮಿತಿಯನ್ನು 80 ಕ್ಕೆ ನಿಗದಿಪಡಿಸಲು ವಿನಂತಿಸಿರುವ ವಿಷಯವನ್ನು ಸಭೆಯ ಗಮನಕ್ಕೆ ತರಲಾಯಿತು. ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಠಿಯಿಂದ ಸಭೆಯು ಎಂ.ಸಿ.ಎ. ಕೋರ್ಸ್‌ಗೆ ಪ್ರವೇಶ ಮಿತಿಯನ್ನು ಒಟ್ಟು 120(40+80) ಕ್ಕೆ ನಿಗದಿಪಡಿಸಲು ತೀರ್ಮಾನಿಸಿತು. |
| 16 | 2025/07/16 | 2025–26ನೇ ಶೈಕ್ಷಣಿಕ ಸಾಲಿನಿಂದ ಕೆ.ಎಲ್.ಇ. ಸಂಸ್ಥೆಯ ಲಿಂಗರಾಜ ಕಲಾ ಮಹಾವಿದ್ಯಾಲಯ(ಸ್ವಾಯತ್ತ)ದ ಎಂ.ಬಿ.ಎ. ಕೋರ್ಸಿಗೆ ಪ್ರವೇಶ ಮಿತಿ ಹೆಚ್ಚಳ ಮಾಡುವ ಕುರಿತು ಸಲ್ಲಿಸಿದ ಪ್ರಸ್ತಾವನೆಗೆ ಅನುಮೋದನೆ ಕುರಿತು |
| | ತೀರ್ಮಾನ | ದಿನಾಂಕ: **06.06.2025** ರ ವಿದ್ಯಾವಿಷಯಕ್ ಪರಿಷತ್ ಸಭೆ ಹಾಗೂ ದಿನಾಂಕ: **10.06.2025** ರ ಸಿಂಡಿಕೇಟ್ ಸಭೆಯಲ್ಲಿ ಕೆ.ಎಲ್.ಇ. ಸಂಸ್ಥೆಯ ಲಿಂಗರಾಜ ಕಲಾ ಮಹಾವಿದ್ಯಾಲಯ(ಸ್ವಾಯತ್ತ)ದ ಎಂ.ಬಿ.ಎ. ಕೋರ್ಸಿಗೆ ಪ್ರವೇಶ ಮಿತಿಯನ್ನು 60 ಕ್ಕೆ ನಿಗದಿಪಡಿಸಲು ತೀರ್ಮಾನಿಸಲಾಗಿದೆ. ಮುಂದುವರೆದು, ಸದರಿ ಮಹಾವಿದ್ಯಾಲಯದ ಪ್ರಾಚಾರ್ಯರು, ಬಿ.ಬಿ.ಎ. ಕೋರ್ಸ್‌ನಲ್ಲಿ ಒಟ್ಟು 260 ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ ಹಾಗೂ ಸಂಸ್ಥೆಯು ಸಾಕಷ್ಟು ಮೂಲಭೂತ ಸೌಕರ್ಯಗಳನ್ನು ಹೊಂದಿರುವುದರಿಂದ ಮತ್ತು ವಿದ್ಯಾರ್ಥಿಗಳ ಬೇಡಿಕೆ ಕೂಡ ಇರುವುದರಿಂದ ಹೆಚ್ಚುವರಿಯಾಗಿ ಪ್ರವೇಶ ಮಿತಿಯನ್ನು 60 ಕ್ಕೆ ನಿಗದಿಪಡಿಸಲು ವಿನಂತಿಸಿರುವ ವಿಷಯವನ್ನು ಸಭೆಯ ಗಮನಕ್ಕೆ ತರಲಾಯಿತು. ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಠಿಯಿಂದ ಸಭೆಯು ಎಂ.ಬಿ.ಎ. ಕೋರ್ಸ್‌ಗೆ ಪ್ರವೇಶ ಮಿತಿಯನ್ನು ಒಟ್ಟು 120(60+60) ಕ್ಕೆ ನಿಗದಿಪಡಿಸಲು ಸಭೆಯು ತೀರ್ಮಾನಿಸಿತು. |
| 17 | 2025/07/17 | ಸಿಂಡಿಕೇಟ್ ಸದಸ್ಯರಾದ ಶ್ರೀ ರಫೀ ಭಂಡಾರಿ ಇವರು ಸಭೆಯಲ್ಲಿ ಚರ್ಚೆಗಾಗಿ ಪ್ರಸ್ತಾಪಿಸಿರುವ ವಿಷಯಗಳು |
| | | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿವಿಧ ವಿಭಾಗಗಳಲ್ಲಿ ಪ್ರವೇಶಾತಿಯು ಕುಂಠಿತಗೊಳ್ಳುತ್ತಿರುವುದರಿಂದ ಅಧ್ಯಯನ ನಡೆಸಿ ವರದಿಯನ್ನು ಸಲ್ಲಿಸಲು ಸಮಿತಿಯನ್ನು ರಚಿಸಲಾಗಿತ್ತು. ಸದರಿ ಸಮಿತಿಯ ಅಧ್ಯಕ್ಷರಾದ ಶ್ರೀ ರಫೀ ಭಂಡಾರಿ ಮಾತನಾಡಿ, ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗಗಳಿಂದ, ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ, ವಿಜಯಪುರ ಹಾಗೂ ಪ್ರಾಚಾರ್ಯರು, ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿ ಇವರುಗಳಿಂದ ಪ್ರವೇಶಾತಿ ಕುರಿತಾದ ಕಳೆದ ಹತ್ತು ವರ್ಷಗಳ ಪ್ರಾಥಮಿಕ ಮಾಹಿತಿಯನ್ನು ಪಡೆದುಕೊಂಡು ಅಧ್ಯಯನ ನಡೆಸಿ ಸಿದ್ಧಪಡಿಸಿದ ಮಧ್ಯಂತರ ವರದಿಯನ್ನು ಸಭೆಗೆ ಪ್ರಸ್ತುತ ಪಡಿಸಿದರು.<br>ಸುತ್ತಮುತ್ತಲಿನ ಸಂಯೋಜಿತ ಮಹಾವಿದ್ಯಾಲಯಗಳಲ್ಲಿ ಈಗಾಗಲೇ ಸ್ನಾತಕೋತ್ತರ ಕೋರ್ಸಗಳು ಚಾಲ್ತಿಯಲ್ಲಿರುವುದು, ಅತಿಥಿ ಉಪನ್ಯಾಸಕರ ಮೇಲೆ ಹೆಚ್ಚಿನ ಅವಲಂಬನೆ, ಬೇಡಿಕೆ ಇರುವ ಕೋರ್ಸ್‌ಗಳನ್ನು(ಇಂಗ್ಲೀಷ/ಸಮಾಜಕಾರ್ಯ ವಿಷಯ) ಪ್ರಾರಂಭಿಸಲು ಆದ್ಯತೆ ನೀಡುವುದು, ವಿಜಯಪುರದ ಸ್ನಾತಕೋತ್ತರ ಕೇಂದ್ರಕ್ಕೆ ಸ್ಥಳೀಯರನ್ನೇ ನಿರ್ದೇಶಕರನ್ನಾಗಿ ನೇಮಿಸುವುದು ಹಾಗೂ ಬಯೋಮೆಟ್ರಿಕ್ಸ್ ಹಾಜರಾತಿಯಲ್ಲಿ ವಿನಾಯಿತಿ ನೀಡುವುದು. ಪ್ರತಿ ವಿಭಾಗದಲ್ಲಿ ಓರ್ವ ಖಾಯಂ ಸಹ ಪ್ರಾಧ್ಯಾಪಕರು ಹಾಗೂ ಸಹಾಯಕ ಪ್ರಾಧ್ಯಾಪಕರನ್ನು ನಿಯೋಜಿಸುವುದು, ಪ್ರವೇಶಾತಿ ಹೆಚ್ಚಿಸಲು ಕಡಿಮೆ ಶುಲ್ಕವನ್ನು/ಭಾಗಶಃ ಶುಲ್ಕವನ್ನು ನಿಗದಿಪಡಿಸುವುದು. ಕೌಶಲ್ಯ ಅಭಿವೃದ್ಧಿ ಕೋರ್ಸಗಳನ್ನು ಪ್ರಾರಂಭಿಸುವುದು, ಎಂ.ಎ ಉರ್ದು ಮತ್ತು ಎಂ.ಎ. ಹಿಂದಿ ವಿಷಯಗಳನ್ನು ಹೊಸದಾಗಿ ಪ್ರಾರಂಭಿಸುವುದು ಹೀಗೆ ಮಧ್ಯಂತರ ವರದಿಯ ಒಟ್ಟು 14 ಶಿಫಾರಸ್ಸುಗಳನ್ನು ಸದಸ್ಯರಾದ ಶ್ರೀ ರಫೀ ಭಂಡಾರಿ ಇವರು ಸಭೆಯ ಗಮನಕ್ಕೆ ತಂದರು.<br>ಶ್ರೀ ವಿನೀತ ಜೋಶಿ:<br>Skill Development ಮತ್ತು Short Term Course ಗಳನ್ನು ಪರಿಚಯಿಸುವುದು.<br>ಡಾ. ಕಾವೇರಿ. ಎಚ್.ಎಂ:<br>ಸ್ಥಳೀಯ ಕೈಗಾರಿಕಾ ಅಥವಾ ಕಂಪನಿಗಳು ಉದ್ಯೋಗಾವಕಾಶ ಕಲ್ಪಿಸುವ ಸಂದರ್ಭದಲ್ಲಿ ಪರಿಗಣಿಸುವ ಕೌಶಲ್ಯದ ಮಾಹಿತಿಯನ್ನು ಸಂಗ್ರಹಿಸಿ, ಸದರಿ ಕೌಶಲ್ಯಗಳನ್ನು ಕೌಶಲ್ಯ ಅಭಿವೃದ್ಧಿ ಕೋರ್ಸಗಳ ಪಠ್ಯಕ್ರಮದಲ್ಲಿ(Syllabus)ಅಳವಡಿಸಲು ಸಲಹೆ ನೀಡಿದರು. ಇದು |

| | | |
|---|---|---|
| | | ಉದ್ಯೋಗಾವಕಾಶಕ್ಕೆ ಸಹಾಯಕಾರಿಯಾಗುವುದು ಮತ್ತು ವಿದ್ಯಾರ್ಥಿಗಳು ಕಲಿಕಾ ಹಂತದಲ್ಲಿಯೇ ಪರಿಣಿತ ಹೊಂದಲು ಸಾಧ್ಯ ಎಂದರು.<br>ಶ್ರೀಮತಿ ಎಸ್. ಬಿ. ಢಂಗ:<br>ಇಂಗ್ಲೀಷ ಮತ್ತು ಹಿಂದಿ Translation ಕೋರ್ಸ್‌ಗಳನ್ನು ಪ್ರಾರಂಭಿಸುವುದು.<br>ಚರ್ಚಿಸಿದ ಸಭೆಯು, ಸ್ನಾತಕೋತ್ತರ ಕೇಂದ್ರ, ವಿಜಯಪುರದ ಸ್ನಾತಕೋತ್ತರ ಕೋರ್ಸ್‌ಗಳಲ್ಲಿ ಪ್ರವೇಶಾತಿ ಕುಂಠಿತಗೊಳ್ಳುತ್ತಿರುವುದರಿಂದ ಪ್ರವೇಶಾತಿ ಹೆಚ್ಚಿಸಲು ಉತ್ತೇಜನ ನೀಡಲು ಬೇಡಿಕೆ ಇರುವ ಕೋರ್ಸಗಳನ್ನು ಪ್ರಾರಂಭಿಸುವ ದೃಷ್ಠಿಯಿಂದ ಇಂಗ್ಲೀಷ ವಿಭಾಗವನ್ನು ಪ್ರಾರಂಭಿಸಲು, ಬೇಡಿಕೆಗೆ ಅನುಸಾರ ಹಿಂದಿ ಮತ್ತು ಉರ್ದು ಕೋರ್ಸಗಳನ್ನು ಆರಂಭಿಸಲು ಕ್ರಮ ವಹಿಸಲು ತೀರ್ಮಾನಿಸಿತು. ಮುಖ್ಯ ಆವರಣ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ಇಲ್ಲಿಯ ಸ್ನಾತಕೋತ್ತರ ಕೋರ್ಸಗಳಿಗೆ ನಿಗದಿಪಡಿಸಲಾಗುವ ಪ್ರವೇಶಾತಿ ಶುಲ್ಕಕ್ಕೆ ಶೇ. 30% ಕಡಿಮೆಗೊಳಿಸಿದ ಶುಲ್ಕವನ್ನು ಸ್ನಾತಕೋತ್ತರ ಕೇಂದ್ರ, ವಿಜಯಪುರದ ಸ್ನಾತಕೋತ್ತರ ಕೋರ್ಸ್‌ಗಳಿಗೆ ಪ್ರವೇಶಾತಿ ಶುಲ್ಕವನ್ನು ನಿಗದಿಪಡಿಸಲು ಸಭೆಯು ತೀರ್ಮಾನಿಸಿತು. ಹೀಗೆ ಪ್ರವೇಶಾತಿ ಶುಲ್ಕದಲ್ಲಿ ವಿನಾಯಿತಿ ನೀಡಿರುವ ವಿಷಯವನ್ನು ಮಹಾವಿದ್ಯಾಲಯಗಳಿಗೆ ಸುತ್ತೋಲೆ ಹೊರಡಿಸಿ ಮಾಹಿತಿಯನ್ನು ನೀಡುವುದು ಹಾಗೂ **2025-26, 2026-27, 2027-28** ನೇಯ ಶೈಕ್ಷಣಿಕ ಸಾಲಿನಲ್ಲಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸಂಯೋಜಿತ ಮಹಾವಿದ್ಯಾಲಯಗಳಲ್ಲಿ ಹೊಸ ಸ್ನಾತಕೋತ್ತರ ಕೋರ್ಸಗಳನ್ನು ತೆರೆಯಲು ತಾತ್ಕಾಲಿಕವಾಗಿ 03 ವರ್ಷದ ಅವಧಿಗೆ ಸಿರಾಕರಿಸಲು ನಿರ್ಧರಿಸಿತು.<br>ಕೌಶಲ್ಯ ಅಭಿವೃದ್ಧಿ ಕೋರ್ಸ್‌ಗಳನ್ನು ಪ್ರಾರಂಭಿಸುವುದಕ್ಕೆ ಸಂಬಂಧಿಸಿದಂತೆ, ಸದರಿ ಕೋರ್ಸ್‌ಗಳ ಅಭ್ಯಾಸ ಮಂಡಳಿ ಅಧ್ಯಕ್ಷರು ಮತ್ತು ಸದಸ್ಯರುಗಳು ಸ್ಥಳೀಯ ಕೈಗಾರಿಕಾ ಅಥವಾ ಕಂಪನಿಗಳಿಗೆ ಭೇಟಿ ನೀಡಿ ಉದ್ಯೋಗವಕಾಶಕ್ಕೆ ಅವಶ್ಯವಿರುವ ಪಠ್ಯಕ್ರಮವನ್ನು ರಚಿಸುವಂತೆ ಸೂಚಿಸಲು ಸಭೆಯು ತಿಳಿಸಿತು.<br>ಮುಂದುವರೆದು, ಸ್ನಾತಕೋತ್ತರ ಕೇಂದ್ರ, ವಿಜಯಪುರದಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ದಿನಕ್ಕೆ ಇಂತಿಷ್ಟು ಸ್ಥಳೀಯ ಸ್ನಾತಕ ಮಹಾವಿದ್ಯಾಲಯಗಳಿಗೆ ಕಡ್ಡಾಯವಾಗಿ ಭೇಟಿ(with GPS Photo) ನೀಡಿ ಸ್ನಾತಕೋತ್ತರ ಕೋರ್ಸ್‌ಗಳ ಬಗ್ಗೆ ಮಾಹಿತಿ ನೀಡಲು ಮತ್ತು ಪ್ರವೇಶಾತಿ ಸಂಖ್ಯೆ ಹೆಚ್ಚಿಸಲು ಸಭೆಯು ತಿಳಿಸಿತು. ಅಗತ್ಯ ಕರಪತ್ರ, ಬ್ಯಾನರ್ ಅಳವಡಿಸಲು ಸೂಚಿಸಿತು.<br>ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಡಾ. ಫ. ಗು. ಹಳಕಟ್ಟಿ ಇವರು ಮೂರ್ತಿ ಸ್ಥಾಪಿಸುವುದು ಮತ್ತು ಪ್ರತಿ ವರ್ಷ ಮಾನ್ಯರ ಜನ್ಮದಿನಾಚರಣೆಯನ್ನು ಆಚರಿಸಲು ನಿರ್ಧರಿಸಲಾಯಿತು. |
| ಅಧ್ಯಕ್ಷರ ಅಪ್ಪಣೆ ಮೇರೆಗೆ ಇನ್ನಿತರ ವಿಷಯಗಳು | | |
| 18 | 2025/07/1 | ವಿಶ್ವವಿದ್ಯಾಲಯದ ವಿವಿಧ ಟೆಂಡರ್ ಪ್ರಕ್ರಿಯೆಗಳನ್ನು ಜರುಗಿಸಲು ಸಕ್ಷಮ ಪ್ರಾಧಿಕಾರಿಗಳನ್ನು ಅಧಿಕೃತಗೊಳಿಸಲು ಕುರಿತು. |
| | ತೀರ್ಮಾನ | ಕರ್ನಾಟಕ ವಿಶ್ವವಿದ್ಯಾಲಯಗಳ ಅಧಿನಿಯಮ-2000 ಕಲಂ, 15(1) ಕುಲಪತಿಗಳ ಪ್ರದತ್ತವಾದ ಅಧಿಕಾರದನ್ವಯ ವಿಶ್ವವಿದ್ಯಾಲಯದಲ್ಲಿ ಟೆಂಡರ್ ಪ್ರಕ್ರಿಯೆಗಳನ್ನು ಜರುಗಿಸಲು ಪ್ರಾಧಿಕೃತ ಅಧಿಕಾರಿಗಳಾದ ಕುಲಸಚಿವರು(ಮೌ) ಇವರಿಗೆ ಪರೀಕ್ಷಾ ವಿಭಾಗಕ್ಕೆ ಸಂಬಂಧಿಸಿದ ಟೆಂಡರ್ ಆಹ್ವಾನಿಸಲು Tender Inviting Authority(Exam) ಎಂದು ಹಾಗೂ ಉಳಿದೆಲ್ಲಾ ಆಡಳಿತಾತ್ಮಕ ಟೆಂಡರ್ ಪ್ರಕ್ರಿಯೆಗಳನ್ನು ಕೈಗೊಳ್ಳಲು ಕುಲಸಚಿವರು(ಆಡಳಿತ) ಇವರನ್ನು Tender Inviting Authority-I ಎಂದು, ವಿಶ್ವವಿದ್ಯಾಲಯದ ಎಲ್ಲ ಟೆಂಡರ್‌ಗಳ (ಪರೀಕ್ಷಾಂಗ ಒಳಗೊಂಡಂತೆ) Accepting Authority ಯಾಗಿ ಕುಲಸಚಿವರು(ಆಡಳಿತ) ಹಾಗೂ ಮಾನ್ಯ ಕುಲಪತಿಗಳು Appeal Authority ಯಾಗಿ ಅಧಿಕೃತಗೊಳಿಸಲು ಹಾಗೂ ಪರೀಕ್ಷಾ ಟೆಂಡರ್ ಕರಾರು ಒಪ್ಪಂದಗಳಿಗೆ ಮಾತ್ರ ಅನ್ವಯಿಸುವಂತೆ ಕುಲಸಚಿವರು ಮತ್ತು ಕುಲಸಚಿವರು(ಮೌ) ಇವರು ಜಂಟಿ ಸಹಿ ಮತ್ತು ಉಳಿದೆಲ್ಲಾ ಟೆಂಡರ್ ಒಪ್ಪಂದಗಳಿಗೆ ಕುಲಸಚಿವರು(ಆಡಳಿತ) ಒಪ್ಪಂದಗಳಿಗೆ ಸಹಿ ಮಾಡಲು, ಏಕೀಕೃತ ಟೆಂಡರ್ ಪರಿಶೀಲನಾ ಸಮಿತಿಯನ್ನು ಅಳವಡಿಸಿಕೊಂಡಿರುವುದಕ್ಕೆ ಸಭೆಯು ಅನುಸಮರ್ಥನೆ ನೀಡಿತು. |

| | | |
|---|---|---|
| 19 | 2025/07/II | ಪ್ರಾರ್ಥನಾ ಸಮಯದಲ್ಲಿ ಸಂವಿಧಾನ ಪೀಠಿಕೆಯನ್ನು ಓದುವ ಬಗ್ಗೆ ಕರ್ನಾಟಕ ಸರ್ಕಾರವು ನಿರ್ದೇಶಿಸಿರುವ ಕುರಿತು. |
| | ತೀರ್ಮಾನ | ಸಚಿವ ಸಂಪುಟದ ಸಭೆಯ ತೀರ್ಮಾನದಲ್ಲಿ, ಭಾರತ ಸಂವಿಧಾನದ ಪೀಠಿಕೆಯನ್ನು ರಾಜ್ಯದ ಶೈಕ್ಷಣಿಕ ಸಂಸ್ಥೆಗಳಲ್ಲಿನ ವಿದ್ಯಾರ್ಥಿಗಳು ಪ್ರಾರ್ಥನಾ ಸಮಯದಲ್ಲಿ ಓದುವ ಮತ್ತು ಪ್ರತಿಜ್ಞೆ ಮಾಡುವ ಮೂಲಕ ಪೀಠಿಕೆಯ ತತ್ವಗಳನ್ನು ಅಳವಡಿಸಿಕೊಳ್ಳುವುದು ಹಾಗೂ ರಾಜ್ಯದ ಎಲ್ಲಾ ಸರ್ಕಾರಿ, ಅರೆ ಸರ್ಕಾರಿ ಕಛೇರಿಗಳಲ್ಲಿ ಸಾರ್ವಜನಿಕ ಸ್ವಾಯತ್ತ ಸಂಸ್ಥೆಗಳು, ನಿಗಮ ಮಂಡಳಿಗಳು ಹಾಗೂ ಸಹಕಾರ ಸಂಘಗಳ ಆವರಣದ ಪ್ರಮುಖ ಸ್ಥಳಗಳಲ್ಲಿ ಹಾಗೂ ಸ್ಥಳೀಯ ಸಂಸ್ಥೆಗಳ ಕಛೇರಿಗಳಲ್ಲಿ ಹಾಗೂ ಎಲ್ಲಾ ರೀತಿಯ ಶಿಕ್ಷಣ ಸಂಸ್ಥೆಗಳು ಸಂವಿಧಾನ ಪೀಠಿಕೆಯ ಭಾವಚಿತ್ರವನ್ನು ಎದ್ದು ಕಾಣುವಂತೆ ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ಪ್ರದರ್ಶಿಸುವುದು ಎಂದು ತಿಳಿಸಿರುತ್ತಾರೆ. ಕಾರಣ, ಸರ್ಕಾರದ ನಿರ್ದೇಶನದಂತೆ ಕ್ರಮ ವಹಿಸಲು ಸಭೆಯು ತೀರ್ಮಾನಿಸಿತು. |
| 20 | 2025/06/III | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ನಡೆಯುವ ವಿವಿಧ ಕಾರ್ಯಕ್ರಮಗಳಿಗೆ ಅವಶ್ಯವಿರುವ ಸಾಮಗ್ರಿಗಳನ್ನು ಖರೀದಿಸುವ ಕುರಿತು. |
| | ತೀರ್ಮಾನ | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಆಯೋಜಿಸಲಾಗುವ ವಿಶೇಷ ಉಪನ್ಯಾಸ, ಕಾರ್ಯಾಗಾರ, ವಿಚಾರ ಸಂಕೀರಣ ಹಾಗೂ ವಿವಿಧ ಕಾರ್ಯಕ್ರಮಗಳಿಗೆ ಸಭೆ-ಸಮಾರಂಭಗಳು ಹಾಗೂ ಇತ್ಯಾದಿ ಕಾರ್ಯಕ್ರಮಗಳಿಗೆ ಆಹ್ವಾನಿಸಲಾಗುವ ಅತಿಥಿಗಳಿಗೆ, ಸಂಪನ್ಮೂಲ ವ್ಯಕ್ತಿಗಳಿಗೆ ವಿಶ್ವವಿದ್ಯಾಲಯದಿಂದ ಗೌರವಿಸುವುದು ಮತ್ತು ಸನ್ಮಾನ ಮಾಡುವ ಅವಶ್ಯಕತೆ ಇರುತ್ತದೆ. ಆದ್ದರಿಂದ, ಸದರಿ ಕಾರ್ಯಕ್ರಮಗಳಿಗೆ ಆಹ್ವಾನಿಸಲಾಗುವ ವಿವಿಧ ದರ್ಜೆಯ(ಎ,ಬಿ,ಸಿ) ಅತಿಥಿಗಳನ್ನು ಸನ್ಮಾನಿಸಲು ವಿಶ್ವವಿದ್ಯಾಲಯ ಪ್ರತಿನಿಧಿಸುವ ಏಕರೂಪದ ಲಾಂಛನ ಹೊಂದಿದ, ಶಾಲು, ಹಾರಗಳು ಮತ್ತು ನೆನಪಿನ ಕಾಣಿಕೆಗಳನ್ನು, ದೆಹಲಿಯ ಮುರಾದಾಬಾದದಿಂದ ಖರೀದಿಸಲು ಸಭೆಯು ತೀರ್ಮಾನಿಸಿತು.<br>ಮುಂದುವರೆದು, ಸದಸ್ಯರಾದ ಶ್ರೀ ಮಹಾಂತೇಶ ಕಂಬಾರ ಇವರು ಸ್ಥಳೀಯ ಮಾರುಕಟ್ಟೆಗಳಲ್ಲಿ ಕಡಿಮೆ ಬೆಲೆಯಲ್ಲಿ ಉತ್ತಮ ಗುಣಮಟ್ಟದ ಹಾರ/ಶಾಲು ಸಿಗಬಹುದು ಎಂದು ಅಭಿಪ್ರಾಯ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ದರಪಟ್ಟಿಗಳ ಮಾಹಿತಿಯನ್ನು ಸಲ್ಲಿಸಲು ಸೂಚಿಸಲಾಯಿತು. |
| 21 | 2025/06/ IV | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿ ನಡೆಯುತ್ತಿರುವ ಸ್ನಾತಕೋತ್ತರ ಕೋರ್ಸ್‌ಗಳಲ್ಲಿ ಕಡಿಮೆ ಪ್ರವೇಶಾತಿ ಹೊಂದಿರುವ ಕೋರ್ಸ್‌ಗಳಿಗೆ ಶುಲ್ಕದಲ್ಲಿ ಕಡಿಮೆ ಮಾಡುವ ಕುರಿತು. |
| | ತೀರ್ಮಾನ | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸ್ನಾತಕೋತ್ತರ ಮರಾಠಿ ಕೋರ್ಸ್‌ಗೆ ಪ್ರವೇಶಾತಿ ಸಂಖ್ಯೆ ಕಡಿಮೆ ಇರುವುದರಿಂದ ವಿದ್ಯಾವಿಷಯಕ್ ಮತ್ತು ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕಡಿಮೆ ಶುಲ್ಕದಲ್ಲಿ ಪ್ರವೇಶಾತಿಯನ್ನು ಕಲ್ಪಿಸಲಾಗಿದೆ. ಮುಂದುವರೆದು, **2024-25** ನೇ ಸಾಲಿಗೆ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿರುವ ಸ್ನಾತಕೋತ್ತರ ಕೋರ್ಸ್‌ಗಳಾದ ಕನ್ನಡ, ಸಮಾಜಶಾಸ್ತ್ರ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗ, ಎಂ.ಸಿ.ಎ. ಕೋರ್ಸಗಳಿಗೆ ವಿದ್ಯಾರ್ಥಿಗಳ ಪ್ರವೇಶಾತಿ ಕಡಿಮೆ ಹೊಂದಿರುವ ಮಾಹಿತಿಯನ್ನು ಸಭೆಗೆ ನೀಡಲಾಯಿತು. ಕಾರಣ, **2025-26**ನೇ ಶೈಕ್ಷಣಿಕ ಸಾಲಿನಿಂದ ಸದರಿ ಕೋರ್ಸ್‌ಗಳಿಗೆ ಪ್ರಸ್ತುತ ನಿಗದಿಪಡಿಸಿರುವ ಪ್ರವೇಶ ಶುಲ್ಕದಲ್ಲಿ ಶೇ. **15** ರಷ್ಟು ಕಡಿಮೆ ಮಾಡಲು ಸಭೆಯು ತೀರ್ಮಾನಿಸಿತು. |
| 22 | 2025/06/ V | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಸರ್ಕಾರದ ಆದೇಶದಂತೆ ಶೇ. 100 ರಷ್ಟು ಇ-ಆಫೀಸ್ ಜಾರಿಗೊಳಿಸುವ ಕುರಿತು. |
| | ತೀರ್ಮಾನ | ಕರ್ನಾಟಕ ಸರ್ಕಾರದ ಆದೇಶಾನುಸಾರ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಆಡಳಿತಾಂಗ, ಪರೀಕ್ಷಾಂಗ, ಹಣಕಾಸು ವಿಭಾಗ, ಇನ್ನಿತರ ಎಲ್ಲ ವಿಭಾಗಗಳಲ್ಲಿ, ಸ್ನಾತಕೋತ್ತರ ಕೇಂದ್ರ, ವಿಜಯಪುರ ಹಾಗೂ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯಗಳಲ್ಲಿ **ಶೇ.100** ರಷ್ಟು(ಸಂಪೂರ್ಣವಾಗಿ) ಕಛೇರಿ ಕಡತಗಳನ್ನು ಇ-ಆಫೀಸ್‌ನಲ್ಲಿ ಅನುಷ್ಠಾನಗೊಳಿಸಲು ಸಭೆಯು ತೀರ್ಮಾನಿಸಿತು. |

| | | |
|---|---|---|
| 23 | 2025/06/VI | ಸ್ನಾತಕ ವಾಣಿಜ್ಯಶಾಸ್ತ್ರ ವಿಭಾಗದಲ್ಲಿ ಅರ್ಥಶಾಸ್ತ್ರ ವಿಷಯದ ಕುರಿತು. |
| | ತೀರ್ಮಾನ | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ನೂತನ ಪಠ್ಯಕ್ರಮಕ್ಕೆ ಸಂಬಂಧಪಟ್ಟಂತೆ ವಾಣಿಜ್ಯಶಾಸ್ತ್ರ ವಿಭಾಗದಲ್ಲಿ ಅರ್ಥಶಾಸ್ತ್ರ ವಿಷಯವನ್ನು ಐಚ್ಚಿಕ ವಿಷಯವಾಗಿ ಸೇರಿಸಲು ಸಭೆಯು ತೀರ್ಮಾನಿಸಿತು. |
| 24 | 2025/07/VII | 2025-26ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಸ್ವಾಯತ್ತ(Autonomous) ಮಹಾವಿದ್ಯಾಲಯಗಳ ಶುಲ್ಕಗಳನ್ನು ಪರಿಷ್ಕರಿಸಲು ಅನುಮೋದನೆ ನೀಡುವ ಕುರಿತು. |
| | ತೀರ್ಮಾನ | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಮುಖ್ಯ ಆವರಣ, ಸಂಯೋಜಿತ ಮಹಾವಿದ್ಯಾಲಯಗಳು ಮತ್ತು ಸ್ವಾಯತ್ತ ಮಹಾವಿದ್ಯಾಲಯಗಳಲ್ಲಿ **2023-24** ನೇ ಶೈಕ್ಷಣಿಕ ಸಾಲಿನಿಂದ ಉನ್ನತ ಶಿಕ್ಷಣ ಇಲಾಖೆ ಹೊರಡಿಸಿರುವ ಆದೇಶದಂತೆ ಸ್ನಾತಕೋತ್ತರ ವಿವಿಧ ಕೋರ್ಸುಗಳಿಗೆ ಏಕರೂಪ ವಿದ್ಯಾರ್ಥಿ ಶುಲ್ಕಗಳನ್ನು ಅಳವಡಿಸಿಕೊಂಡು, ಸದರಿ ಆದೇಶದಂತೆ ಪ್ರತಿ ವರ್ಷ ಪ್ರತಿಶತ ಶೇ. **10** ರಷ್ಟು ಹೆಚ್ಚಿಸಿ ಶುಲ್ಕಗಳನ್ನು ಆಕರಿಸಲಾಗುತ್ತಿದೆ.<br>ಮುಂದುವರೆದು, **2025-26** ನೇ ಶೈಕ್ಷಣಿಕ ಸಾಲಿನಿಂದ ಸ್ವಾಯತ್ತ(Autonomous) ಮಹಾವಿದ್ಯಾಲಯಗಳಿಗೆ ಮಾತ್ರ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸಂಯೋಜಿತ ಮಹಾವಿದ್ಯಾಲಯಗಳಿಗೆ ನಿರ್ಧರಿಸಲಾದ ಶುಲ್ಕಗಳಿಗಿಂತ ಹೆಚ್ಚಿನ ಶುಲ್ಕಗಳನ್ನು ಆಕರಣೆ ಮಾಡಲು ಸಿಂಡಿಕೇಟ್ ಸಭೆಯು ಅನುಮೋದನೆ ನೀಡಿತು. |
| 25 | 2025/07/VIII | ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಬೆಂಗಳೂರು ಇವರು ದಿನಾಂಕ: **08.09.2025** ರಿಂದ **18.09.2025** ರವರೆಗೆ ವಿಶ್ವವಿದ್ಯಾಲಯದ ಎಲ್ಲ ಕುಲಪತಿಗಳು ಹಾಗೂ ನೋಡಲ್ ಅಧಿಕಾರಿಗಳಿಗೆ ಆಯೋಜಿಸಿರುವ Leadership development ಎಂಬ Programme ನಲ್ಲಿ ಭಾಗವಹಿಸುವಂತೆ ಆದೇಶವನ್ನು ಹೊರಡಿಸಿರುತ್ತಾರೆ. ಕಾರಣ, ಸದರಿ ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳು ಹಾಗೂ ನೋಡಲ್ ಅಧಿಕಾರಿಗಳು ಭಾಗವಹಿಸಲು ಸಭೆಯು ಅನುಮೋದನೆ ನೀಡಿತು. |
| 26 | 2025/07/IX | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ **2025-26**ನೇ ಶೈಕ್ಷಣಿಕ ಸಾಲಿನಲ್ಲಿ ಎಲ್ಲಾ ಸ್ನಾತಕೋತ್ತರ ವಿಭಾಗಗಳ ಆಂತರಿಕ ಅಂಕಗಳನ್ನು Work Book ಮುಖಾಂತರ ಜಾರಿಗೊಳಿಸಲು ಮತ್ತು ಸ್ನಾತಕೋತ್ತರ ನಿಯಮಾವಳಿಗಳನ್ನು ನಿಕಾಯಗಳ(Faculty) ಅನ್ವಯ ತಯಾರಿಸಲಾಗಿದ್ದು, ಸದರಿ ವಿಷಯಕ್ಕೆ ಸಭೆಯು ಅನುಮೋದನೆ ನೀಡಿತು. |
| 27 | 2025/07/X | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಪ್ರಸ್ತುತವಾಗಿ ಸ್ನಾತಕ/ಸ್ನಾತಕೋತ್ತರ(UG/PG-Regular Mode)ಕೋರ್ಸ್‌ಗಳೊಂದಿಗೆ **2025-26**ನೇ ಸಾಲಿನಿಂದ ಯುಜಿಸಿ ನಿಯಮಾವಳಿಯನ್ವಯ, ವಿಶ್ವವಿದ್ಯಾಲಯದಲ್ಲಿ ಹೊಸದಾಗಿ Correnspondence(ODL) Course (Duel Mode System) ನ್ನು ಪ್ರಾರಂಭಿಸಲು ವಿದ್ಯಾವಿಷಯಕ್ ಪರಿಷತ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ ಸಿಂಡಿಕೇಟ್ ಸಭೆಯು ಅನುಮೋದನೆ ನೀಡಿತು. |
| 28 | 2025/07/XI | ಡಾ. ಕಾವೇರಿ ಎಚ್.ಎಂ. ಇವರು ಪ್ರಸ್ತಾಪಿಸಿರುವ ವಿಷಯ:<br>ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿ ಇಲ್ಲಿ ಸಂಶೋಧನಾರ್ಥಿಗಳಿಂದ ಬೋಧನಾ ಕಾರ್ಯವನ್ನು ಕೈಗೊಳ್ಳಲು ನಿರ್ಧರಿಸಲಾಗಿದ್ದು, ಇದರಿಂದಾಗಿ ಅಲ್ಲಿರುವ ಅತಿಥಿ ಉಪನ್ಯಾಸಕರ ಕಾರ್ಯಭಾರ ಕಡಿಮೆಯಾಗಿ ಉದ್ಯೋಗಾವಕಾಶದ ತೊಂದರೆಯಾಗುತ್ತದೆ. ಕಳೆದ **10** ರಿಂದ **15** ವರ್ಷದಿಂದ ಅತಿಥಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿರುವವರ ನೇಮಕವನ್ನು ಮುಂದುವರೆಸುವುದು ಸೂಕ್ತ ಎಂದರು.<br>ಪ್ರತಿಕ್ರಿಯಿಸಿದ ಕುಲಪತಿಗಳು, ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದಲ್ಲಿ ಅತಿಥಿ ಉಪನ್ಯಾಸಕರನ್ನು ಸರ್ಕಾರ ಮತ್ತು ಯುಜಿಸಿ ನಿಯಮಾನುಸಾರ "ನೇಮಕಾತಿ ಸಮಿತಿ"ಯು ಶೈಕ್ಷಣಿಕ ದಾಖಲಾತಿಗಳನ್ನು ಪರಿಶೀಲಿಸಿ, ಸಂದರ್ಶನ ನಡೆಸಿ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡುಲಾಗುತ್ತದೆ. "ನೇಮಕಾತಿ ಸಮಿತಿ"ಯು ನಡೆಸುವ ಅತಿಥಿ ಉಪನ್ಯಾಸಕರ ಸಂದರ್ಶನದಲ್ಲಿ ಸಿಂಡಿಕೇಟ್ ಸದಸ್ಯರುಗಳು ಪರಿವೀಕ್ಷಿಸಲು ಆಹ್ವಾನಿಸಿದರು. ಮುಂದುವರೆದು, ಯುಜಿಸಿ ನಿಯಮಾವಳಿಯಲ್ಲಿ ಸಂಶೋಧನಾರ್ಥಿಗಳು ಬೋಧನಾ ಕಾರ್ಯ ಕೈಗೊಳ್ಳಲು ನಿಯಮವಿರುವುದರಿಂದ ಅಂತಹ |

| | | |
|---|---|---|
| | | (GRF/SRF)ಸಂಶೋಧನಾರ್ಥಿಗಳನ್ನು, ವಾರಕ್ಕೆ 4 ಗಂಟೆ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದಲ್ಲಿ ಬೋಧನಾ ಕಾರ್ಯಕ್ಕೆ ತೊಡಗಿಸಲಾಗುವುದು ಎಂದರು. |
| 29 | 2025/07/ XII | ವಿಶ್ವವಿದ್ಯಾಲಯದಲ್ಲಿ ವಿವಿಧ ವಿಭಾಗಗಳಿಂದ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದ್ದು, ಅಂತಹ ಸಮಾರಂಭಗಳಿಗೆ ಸಿಂಡಿಕೇಟ್ ಸದಸ್ಯರುಗಳನ್ನು ಕೂಡ ಆಹ್ವಾನಿಸಲು ಶ್ರೀ ಮಹಾಂತೇಶ ಕಂಬಾರ ಇವರು ಸಭೆಗೆ ತಿಳಿಸಿದ ಹಿನ್ನೆಲೆಯಲ್ಲಿ, ಮುಂದಿನ ದಿನಗಳಲ್ಲಿ ಆಯೋಜಿಸುವ ಕಾರ್ಯಕ್ರಮಗಳಿಗೆ ಸರದಿ ಆಧಾರದ ಮೇಲೆ ಓರ್ವ ಸಿಂಡಿಕೇಟ್ ಸದಸ್ಯರನ್ನು ಆಹ್ವಾನಿಸಲು ಸಭೆಯು ತೀರ್ಮಾನಿಸಿತು. |
| 30 | 2025/07/ XIII | ವಿಶ್ವವಿದ್ಯಾಲಯದಲ್ಲಿ ಪಿಎಚ್.ಡಿ. ಸಂಶೋಧನಾರ್ಥಿಗಳಿಗೆ ಆಯೋಜಿಸಲಾಗುವ ಕಾರ್ಯಾಗಾರಗಳಿಗೆ ಗೈರು ಹಾಜರಾಗುವ ಸಂಶೋಧನಾರ್ಥಿಗಳಿಗೆ ದಂಡ ವಿಧಿಸಲಾಗುತ್ತಿದ್ದು, ಕೆಲವು ಸಂಶೋಧನಾರ್ಥಿಗಳು ಕಡುಬಡವರಾಗಿದ್ದು ಉದ್ಯೋಗದಲ್ಲಿ ತೊಡಗಿಸಿಕೊಂಡು ಅರೆಕಾಲಿಕ ಸಂಶೋಧನಾ ನಡೆಸುತ್ತಿದ್ದಾರೆ. ಅಂತಹ ವಿದ್ಯಾರ್ಥಿಗಳಿಗೆ ದಂಡದಲ್ಲಿ ವಿನಾಯಿತಿ ನೀಡಲು ಸದಸ್ಯರಾದ ಶ್ರೀ ರಫೀ ಭಂಡಾರಿ ಇವರು ಮನವಿ ಸಲ್ಲಿಸದ ಹಿನ್ನೆಲೆಯಲ್ಲಿ ಕುಲಪತಿಗಳು ಪರಿಶೀಲಿಸುವುದಾಗಿ ಸಭೆಗೆ ತಿಳಿಸಿದರು. |
| 31 | 2025/07/ XIV | ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿ ಇಲ್ಲಿ ಉರ್ದು ಮತ್ತು ಹಿಂದಿ ವಿಷಯವನ್ನು ಪ್ರಾರಂಭಿಸಲು ಶ್ರೀ ರಫೀ ಭಂಡಾರಿ ಇವರು ಮನವಿ ಸಲ್ಲಿಸಿದ ಹಿನ್ನೆಲೆಯಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸಭೆಯು ತೀರ್ಮಾನಿಸಿತು. |
| 32 | 2025/07/ XV | ಸ್ನಾತಕೋತ್ತರ ಕೇಂದ್ರ, ವಿಜಯಪುರದ ದ್ವಾರ(Gate) ದಲ್ಲಿ ಬಣ್ಣ ಹಚ್ಚಿ ಆಧುನಿಕವಾಗಿ ನಾವಿನ್ಯತೆದಿಂದ ನಿರ್ಮಿಸಲು ಸದಸ್ಯರಾದ ಶ್ರೀ ಮಹಾಂತೇಶ ಕಂಬಾರ ಇವರು ಕೋರಿದರು. |
| 33 | 2025/07/ XVI | PM-Usha ಯೋಜನೆಯಡಿಯಲ್ಲಿ New Module Degree College ಸ್ಥಾಪಿಸಲು ಅವಕಾಶವಿದ್ದು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಮತ್ತು ಸ್ನಾತಕೋತ್ತರ ಕೇಂದ್ರ, ವಿಜಯಪುರದಲ್ಲಿ ಎರಡು New Module Degree College ಸ್ಥಾಪಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸದಸ್ಯರಾದ ಶ್ರೀ ರಫೀ ಭಂಡಾರಿ ಇವರು ಮನವಿ ಸಲ್ಲಿಸಿದ ಹಿನ್ನೆಲೆಯಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸಭೆಯು ತೀರ್ಮಾನಿಸಿತು. |

ಕೊನೆಯದಾಗಿ, ಎಲ್ಲ ಸದಸ್ಯರುಗಳಿಗೆ ವಂದನೆಯನ್ನು ಸಲ್ಲಿಸುವುದರ ಮೂಲಕ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು

ಕುಲಪತಿಗಳು ಹಾಗೂ ಅಧ್ಯಕ್ಷರು

ಇವರಿಗೆ,

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಎಲ್ಲ ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ

ಪ್ರತಿ ಮಾಹಿತಿಗಾಗಿ : ಹಣಕಾಸು ಅಧಿಕಾರಿಗಳು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.

# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ – 04, ಭೂತರಾಮನಹಟ್ಟಿ, ಬೆಳಗಾವಿ – 591156

(ನ್ಯಾಕ್ ಮಾನ್ಯತೆ B+ ಗ್ರೇಡ್– 2021)PM-USHA (MERU)

# RANI CHANNAMMA UNIVERSITY

Vidyasangama, National Highway – 04, Bhootaramanahatti, Belagavi – 591156

(NAAC Accredited with B+ Grade – 2021) PM-USHA (MERU)

E-mail: registrar@rcub.ac.in

ಕುಲಸಚಿವರ ಕಾರ್ಯಾಲಯ

Office of the Registrar

Website: www.rcub.ac.in

Phone No.: 0831-2565234


ಕ್ರ.ಸಂ.: ರಾಚವಿಬೆ/ಕುಸಕಾ/ಜಿಎಡಿ/ಸಿಂಡಿಕೇಟ್/2025-26/ 2119 ದಿನಾಂಕ: 18 JUL 2025

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ
ಎಲ್ಲಾ ಸಿಂಡಿಕೇಟ್ ಸದಸ್ಯರುಗಳಿಗೆ,

ಮಾನ್ಯರೆ,

ವಿಷಯ : ದಿನಾಂಕ : 08-07-2025 ರಂದು ಜರುಗಿದ ಸಿಂಡಿಕೇಟ್ ಸಭೆಯ ನಡಾವಳಿಯ ಪ್ರತಿಯನ್ನು ಕಳುಹಿಸುವ ಕುರಿತು.

ಉಲ್ಲೇಖ: ಸಿಂಡಿಕೇಟ್ ಸಭೆ ನಡೆದ ದಿನಾಂಕ : 08-07-2025

ದಿನಾಂಕ : 08-07-2025 ರಂದು ಸ್ನಾತಕೋತ್ತರ ಕೇಂದ್ರ ವಿಜಯಪುರದಲ್ಲಿ ಜರುಗಿದ ಸಿಂಡಿಕೇಟ್ ಸಭೆಯಲ್ಲಿ ಮಾಡಿರುವ ಚರ್ಚೆ ಮತ್ತು ಕೈಕೊಳ್ಳಲಾಗಿರುವ ನಿರ್ಣಯಗಳ ಪ್ರತಿಯನ್ನು ಈ ಮೂಲಕ ತಮ್ಮ ಅವಗಾಹನೆಗಾಗಿ ಮತ್ತು ಧೃಡೀಕರಣಕ್ಕಾಗಿ ಕಳಿಸುತ್ತಿದ್ದೇನೆ. ಇದರಲ್ಲಿರುವ ಯಾವುದೇ ವಿಷಯಗಳ ಬಗ್ಗೆ ತಮ್ಮ ಸಹಮತಿ ಇಲ್ಲದಿದ್ದಲ್ಲಿ ಲಿಖಿತವಾಗಿ ಅಗತ್ಯ ಟಿಪ್ಪಣಿಗಳೊಂದಿಗೆ ದಿನಾಂಕ : 21-07-2025ರ ಒಳಗೆ ವಿಶ್ವವಿದ್ಯಾಲಯಕ್ಕೆ ಇ-ಮೇಲ್ ಮುಖಾಂತರ ಸಲ್ಲಿಸಲು ಕೋರಿದೆ.

ಯಾವುದೇ ವಿಷಯದ ಅಸಹಮತಿಯ, ಲಿಖಿತ ಟಿಪ್ಪಣಿ ನಿಗಧಿತ ಸಮಯದಲ್ಲಿ ಸ್ವೀಕರಿಸದೇ ಇದ್ದಲ್ಲಿ ಎಲ್ಲಾ ವಿಷಯಗಳಿಗೆ ತಮ್ಮ ಧೃಡೀಕರಣ ಇದೆಯೆಂದು ಭಾವಿಸಿ, ಮುಂದಿನ ಕ್ರಮ ಜರುಗಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಸಂತೋಷ ಕಾಮಗೌಡ ಕೆ.ಎ.ಎಸ್.
ಕುಲಸಚಿವರು